ಓಂ ಶ್ರೀ ಗುರು ಬಸವಲಿಂಗಾಯ ನಮಃ

866666

ಕಲ್ಯಾಣ ಕಿರಣ

ಜೂನ್ 2017

ಶರಣರ ನಡೆ ಮುಕ್ತಿಯ ಕಡೆ




₹-20/-

http://kalyanakirana.over-blog.com/ ಬ್ಲಾಗ್‌ನಲ್ಲಿ

ಶರಣೋತ್ಸವದ ಸುಮಧುರ ಕ್ಷಣಗಳು







ಶ್ರೀ ಲಿಂಗಾನಂದ ಗುರುವಿಗೆ ನಮೋ

ಕುರುಹಿನ ಸಹಾಯದಿಂ ಅರಿವು ಅರಳುತ್ತಲಿ
ಅಜ್ಞಾನವೆಲ್ಲವೂ ಅಳಿಯಲು ಲಿಂಗದೇವನ
ವರವದುವೇ ನೋಡಾ ॥
ನಿಜವ ನರುಹಿದ ಲಿಂಗಾನಂದ ಗುರುವೆ

ಶಿವಪೂಜೆ ಎನ್ನುತಲಿ ಶಿವನ ಕೊಂಡಾಡುತಲಿ
ಆವಾದ್ವೈತದಲಿ ಮೆರೆವ ಶಿವಾಚಾರಿಗಳಿಗೆ
ಲಿಂಗದೇವನ ನಿಲುವೆಂತು ತಿಳಿವುದು? ॥
ನಿಜವ ನರುಹಿದ ಲಿಂಗಾನಂದ ಗುರುವೆ

ತಾವೂ ನಂಬರು ನಂಬಿದವರನ್ನೂ ಸೈರಿಸರು
ಹುಂಬರಂತೆ ವರ್ತಿಸುವ ಜಂಗಮರ ಜಂಗುಳಿಗೆ
ಲಿಂಗದೇವನ ನಿಲುವೆಂತು ತಿಳಿವರಯ್ಯಾ ॥
ನಿಜವ ನರುಹಿದ ಲಿಂಗಾನಂದ ಗುರುವೆ

ಸೂರು ಮಾಡಿಕೊಂಡು, ಕಾರಿನಲಿ ಮೆರೆದವರನು ಕಂಡೆ
ಶಾಲೆ, ಕಾಲೇಜಗಳ ತೆರೆದು ಹಣ ದೋಚಿಕೊಂಡವರಕಂಡೆ
ಧರ್ಮಗುರು ಬಸವಣ್ಣನವರ ಮೂರ್ತಿ ಮಾಡಿದರಾರು ಹೇಳಾ
ನಿಜವ ನರುಹಿದ ಲಿಂಗಾನಂದ ಗುರುವೆ

ಲಕ್ಷ ದೀಪೋತ್ಸವ, ಕೋಟಿ ಬಿಲ್ವಾರ್ಚನೆ ಎಂದೆನ್ನುತ
ನಾಟಕವ ಮಾಡಿ ಜನರ ಕೊಳ್ಳೆಹೊಡೆದು ಹೆಗಲೇರಿ ಮೆರೆವ
ಹಗಲುಗಳ್ಳರನು ಕಂಡು ನಗೆ ಬರುತಿಹುದಯ್ಯಾ ॥
ನಿಜವ ನರುಹಿದ ಲಿಂಗಾನಂದ ಗುರುವೆ

ಮಾತೃ ಹೃದಯದ ಪೂಜ್ಯ ಮಾತಾಜಿಯವರು
ಲಿಂಗದೇವನೆಂಬ ಮಾಣಿಕ್ಯವನು ತಂದು ಕೊಟ್ಟಿರಲು
ಮಾಣಿಸದ ಮಾನಗೇಡಿಗಳು ಮೂಗು ಮುರಿಯುತ್ತಿವೆ ನೋಡಾ ॥
ನಿಜವ ನರುಹಿದ ಲಿಂಗಾನಂದ ಗುರುವೆ

ಬಸವಳಿದು ನಿಂತ ಬಸವ ಧರ್ಮಕ್ಕೊಂದು ಹೊಸ
ರೂಪ ತಂದುಕೊಟ್ಟ ಪೂಜ್ಯ ಮಾತಾಜಿಯವರನ್ನು
ಮತ್ಸರಿಸುವರ ಕಂಡು ಮನ ಮರಗುತ್ತಿದೆ ನೋಡಾ ॥
ನಿಜವ ನರುಹಿದ ಲಿಂಗಾನಂದ ಗುರುವೆ

– ಶರಣ.ಮಹಾದೇವ ಗುಡೇರ್

|| ಓಂ ಶ್ರೀ ಗುರು ಬಸವಲಿಂಗಾಯ ನಮಃ ||

866666

ಸಂಪುಟ-49 ಬಸವ ಶಕೆ -884 ಪಂಚ ವಾರ್ಷಿಕ ಸದಸ್ಯತ್ವ 1000 ರೂ.

ಸಂಚಿಕೆ-06 ಜೂನ್-2017 ವಾರ್ಷಿಕ ಚಂದಾ 200 ರೂ.

ಕಿರಣ ಗನ್ನಡಿ

ಜುಲೈ ತಿಂಗಳಲ್ಲಿ ಬರುವ ಹಬ್ಬ ಹುಣ್ಣಿಮೆ

ಶ್ರಾವಣಮಾಸದ ಬಸವಜ್ಯೋತಿ ಆರಂಭ	–	ಜುಲೈ-24
ನೀಲಾಂಬಿಕಾ ಷಷ್ಠಿ(ಲಿಂಗೈಕ್ಯ ಸಂಸ್ಮರಣೆ)	–	ಜುಲೈ-29
ಬಸವ ಪಂಚಮಿ(ಲಿಂಗೈಕ್ಯ ಸಂಸ್ಮರಣೆ)	–	ಜುಲೈ-30

Kalyana Kirana -Reg No.19988/70. Monthly Magazine Edited and Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, Basava Mantapa Road, 2nd Block, Rajajinagar, Bengaluru-560010. Phone : 080-23131476, Send SMS to 9945806297 Email-kalyana.kirana1134@gmail.com



ಓಂ ಶ್ರೀ ಗುರು ಬಸವ ಲಿಂಗಾಯ ನಮಃ

866666

ಬೆಂಗಳೂರು - ಮೈಸೂರು ಹೆದ್ದಾರಿಯಲ್ಲಿರುವ

ಬಸವ ಗಂಗೋತ್ರಿಯಲ್ಲಿ

ಬಸವೋತ್ಸವ ಕಾರ್ಯಕ್ರಮ

ದೇವ(ಭಾನು)ವಾರ ಜೂನ್ 18 ರಂದು

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಬೆಂಗಳೂರಿನಲ್ಲಿ 1975ರಲ್ಲಿ ವಿಧ್ಯುಕ್ತವಾಗಿ ಪ್ರಾರಂಭವಾಗಿ, 1977ರಲ್ಲಿ ಇಂಡಿಯನ್ ಟ್ರಸ್ಟ್ ಆಕ್ಟ್ ಪ್ರಕಾರ ನೋಂದಣಿಯಾಯಿತು. ಪರಮ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮೀಜಿಯವರು ಅಧ್ಯಕ್ಷರಾಗಿ ಆರಂಭದಿಂದಲೂ ಸಂಸ್ಥೆಯನ್ನು ಮುನ್ನಡೆಸಿದರು. ಬೆಂಗಳೂರಿನ ರಾಜಾಜಿನಗರದ 2ನೇ ಬ್ಲಾಕ್‌ನ 20ನೆಯ ಮುಖ್ಯ ರಸ್ತೆಯಲ್ಲಿ ಪ್ರಥಮ ಬಸವ ಮಂಟಪವು ನಿರ್ಮಾಣವಾಗಿ 1975ರ ಬಸವ ಜಯಂತಿಯಂದು ಉದ್ಘಾಟನೆಗೊಂಡಿತು. 1978ರಲ್ಲಿ ವಿಶ್ವಕಲ್ಯಾಣ ಮಿಷನ್ ಟ್ರಸ್ಟ್ ಕುಂಬಳಗೋಡು ಗ್ರಾಮ ವ್ಯಾಪ್ತಿಯಲ್ಲಿ ಬೆಂಗಳೂರು -ಮೈಸೂರು ಹೆದ್ದಾರಿಯಲ್ಲಿ ವಿಶಾಲವಾದ ಜಮೀನನ್ನು ಖರೀದಿಸಿತು. ಇದು ಬಸವ ಗಂಗೋತ್ರಿ ಆಶ್ರಮ ಎಂಬ ಹೆಸರು ಹೊಂದಿದೆ. ಇಲ್ಲಿ ಬಸವ ತತ್ವ ತರಬೇತಿ ಶಿಬಿರಗಳನ್ನು ಆಗಾಗ ನಡೆಸಲಾಗುತ್ತದೆ. ಅನಾಥಾಶ್ರಮ ಮತ್ತು ವೃದ್ಧಾಶ್ರಮಗಳನ್ನು ಸಂಸ್ಥೆಯು ನಡೆಸುತ್ತಲಿದೆ.

ಬಸವ ಗಂಗೋತ್ರಿಯಲ್ಲಿ ಬಸವಾಲಯವೊಂದನ್ನು ನಿರ್ಮಿಸಿದ್ದು ಇದರೊಳಗೆ ಗುರು ಬಸವಣ್ಣನವರ ಪಂಚಲೋಹದ ಪುತ್ಥಳಿಯನ್ನು ಸ್ಥಾಪಿಸಲಾಗಿದೆ. ಈ ಮೂರ್ತಿಯ ದಾನಿಗಳು ಲಿಂ|| ಶರಣ. ಜಿ.ಎನ್.ಮುನಿಯಪ್ಪ ಅವರ ಸಹೋದರರು ಹಾಗೂ ಮಕ್ಕಳು. ಇಲ್ಲಿ ನಿತ್ಯವೂ ಪೂಜೆ - ಪ್ರಾರ್ಥನೆಗಳು ಕ್ರಮಬದ್ಧವಾಗಿ ನಡೆಯುತ್ತಿವೆ. ಬಸವ ಗಂಗೋತ್ರಿಯ ಆವರಣದಲ್ಲಿರುವ ಪ್ರಾರ್ಥನಾ ಮಂದಿರ ಬಸವ ಮಂಟಪದಲ್ಲಿ ವಿಶೇಷ ಕಾರ್ಯಕ್ರಮಗಳು ಜರುಗುತ್ತವೆ.

ಬಸವೋತ್ಸವ ಕಾರ್ಯಕ್ರಮ

ಬಸವ ಗಂಗೋತ್ರಿಯಲ್ಲಿ ಆಗಾಗ ಬಸವ ತತ್ವ ತರಬೇತಿ ಶಿಬಿರವನ್ನು, ವಿಶೇಷ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆಯಾದರೂ 2010ನೇ ಇಸ್ವಿಯಿಂದ ವಾರ್ಷಿಕ ಉತ್ಸವವನ್ನಾಗಿ ಬಸವೋತ್ಸವವನ್ನು ನಡೆಸುವ ಸಂಕಲ್ಪ ತಳೆಯಲಾಗಿದೆ. ಅದರಂತೆ ದಿನಾಂಕ 18-6-2017ರಂದು ಏಳನೆಯ ಬಸವೋತ್ಸವವನ್ನು ಏರ್ಪಡಿಸಲಾಗಿದೆ. ಬೆಳಿಗ್ಗೆ 10-30ಕ್ಕೆ ಉದ್ಘಾಟನೆ. ದಿ. 27-5-2010 ರಂದು ಜಗದ್ಗುರು ಶ್ರೀ ಚೆನ್ನಬಸವೇಶ್ವರ ಜ್ಞಾನ ಪೀಠವು ಸ್ಥಾಪನೆ ಗೊಂಡಿದ್ದು ಪೂಜಾ ನಿಷ್ಠರು, ಬಹುಭಾಷಾ ಪರಿಣಿತರು, ಜ್ಞಾನಿಗಳು, ತ್ಯಾಗಿಗಳು, ಉತ್ತಮ ಸಂಘಟಕರೂ ಆಗಿರುವ ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮಿಗಳು ಪೀಠಾರೋಹಣ ಮಾಡಲಿದ್ದಾರೆ. ಪೀಠಾರೋಹಣದ ವಾರ್ಷಿಕೋತ್ಸವದ ಸಮಾರಂಭ ಜರುಗಲಿದೆ. ಪೂಜ್ಯರಿಗೆ ಅಭಿನಂದನೆ ಮತ್ತು ಗೌರವಾರ್ಪಣೆ ; ನಂತರ ಸಮಾರೋಪ.

ದಿ. 17-6-2017ರಿಂದ ದಿ. 19-6-2017ರ ಬೆಳಗಿನವರೆಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆಯನ್ನು ಬರಲಿರುವ ಶರಣ ಬಂಧುಗಳಿಗೆ ಮಾಡಬೇಕಾಗುತ್ತದೆ. ಆದ್ದರಿಂದ ಸಾರ್ವಜನಿಕರಿಂದ ಉದಾರವಾದ ದೇಣಿಗೆಯನ್ನು ಕೋರುತ್ತೇವೆ.

ಒಬ್ಬೊಬ್ಬರು ಒಂದು ಹೊತ್ತಿನ ಪ್ರಸಾದದ ವ್ಯವಸ್ಥೆಯನ್ನು ವಹಿಸಿಕೊಳ್ಳಬಹುದು. ಆಸಕ್ತರು ದೂರವಾಣಿ ಮೂಲಕ ವಿವರ ಪಡೆಯಬಹುದು.

ಮಹಾಪೋಷಕರು	10000ರೂ	ಹಿತೈಷಿಗಳು	1000ರೂ
ಪೋಷಕರು	5000ರೂ	ವಿಶೇಷ ಸದಸ್ಯರು	500ರೂ
ದಾನಿಗಳು	3000ರೂ	ಸಾಮಾನ್ಯ ಸದಸ್ಯರು	250ರೂ

ಬಸವೋತ್ಸವದ ಯಶಸ್ಸಿಗಾಗಿ ಎಲ್ಲರೂ ತನು ಮನ ಧನಗಳಿಂದ ಸಹಕರಿಸಬೇಕೆಂದು, ಸ್ವತಃ ಉದಾರವಾಗಿ ದೇಣಿಗೆಯನ್ನು ನೀಡುವುದಲ್ಲದೆ ರಸೀತಿ ಪುಸ್ತಕಗಳನ್ನು ಪಡೆದುಕೊಂಡು ದೇಣಿಗೆಯನ್ನು ಸಂಗ್ರಹಿಸಿಕೊಡಬೇಕೆಂದು ಕೋರುತ್ತೇವೆ. ದವಸ -ಧಾನ್ಯ, ಅಕ್ಕಿ- ಬೇಳೆ, ಬೆಲ್ಲ-ಸಕ್ಕರೆ, ತರಕಾರಿ ಇತ್ಯಾದಿ ವಸ್ತುಗಳನ್ನು ಸಹ ನೀಡಬಹುದು.

ಬಸವ ಗಂಗೋತ್ರಿಗೆ ಸಿಟಿ ಮಾರುಕಟ್ಟೆಯಿಂದ 223,224,226 ರೂಟ್‌ನಂಬರ್ ಬಸ್ಸುಗಳು ಸಂಚರಿಸುತ್ತವೆ. ಮೆಜೆಸ್ಟಿಕ್‌ನಿಂದ ರಾಮನಗರ, ಬಿಡದಿ ಕಡೆಗೆ ಹೋಗುವ ಬಸ್ಸುಗಳು ಬೇಡಿಕೆಯ ಮೇರೆಗೆ ನಿಲ್ಲುತ್ತವೆ. ಬಸವ ಗಂಗೋತ್ರಿ ಪ್ರವೇಶ ದ್ವಾರವು ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ಮಧ್ಯದಲ್ಲಿದೆ.

ಸಂಪರ್ಕಿಸುವ ವಿಳಾಸಗಳು

ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
ವಿಶ್ವಕಲ್ಯಾಣ ಮಿಷನ್, ಬಸವ ಗಂಗೋತ್ರಿ
ಬೆಂಗಳೂರು -ಮೈಸೂರು ಹೆದ್ದಾರಿ
ಕುಂಬಳಗೋಡು -560074
ಬೆಂಗಳೂರು ದಕ್ಷಿಣ ತಾಲ್ಲೋಕು
ಮೊ: 9448386717

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ವಿಶ್ವಕಲ್ಯಾಣ ಮಿಷನ್
ನಂ. 2035, 20ನೇ ಮುಖ್ಯರಸ್ತೆ
2ನೇ ಬ್ಲಾಕ್, ರಾಜಾಜಿ ನಗರ
ಬೆಂಗಳೂರು -560010
ಮೊ: 9663385657

ಅನಾಥಾಲಯ ಮತ್ತು ವಿದ್ಯಾರ್ಥಿ ನಿಲಯಕ್ಕೆ ಪ್ರವೇಶ

ಒಂದನೆಯ ತರಗತಿಯಿಂದ ಎಸ್.ಎಸ್.ಎಲ್.ಸಿ.ವರೆಗಿನ ವಿದ್ಯಾಭ್ಯಾಸಕ್ಕೆ ಅನಾಥ ಬಾಲಕಿಯರಿಗೆ ಬಸವ ಗಂಗೋತ್ರಿ ಅನಾಥಾಲಯದಲ್ಲಿ ಪ್ರವೇಶಾವಕಾಶವಿದೆ. ನಿರ್ಗತಿಕ ಬಡಮಕ್ಕಳಿಗೆ, ಬಾಲಕ -ಬಾಲಕಿ ಉಭಯತರಿಗೆ, ಒಂದರಿಂದ ಏಳನೆಯ ತರಗತಿಯವರೆಗೆ ಪ್ರವೇಶಾವಕಾಶವಿದೆ.

ಸಂಪರ್ಕಿಸುವ ವಿಳಾಸ :
ಪೂಜ್ಯ ಮಾತೆ ಕಸ್ತೂರಿದೇವಿ,
ಬಸವ ಗಂಗೋತ್ರಿ ಅನಾಥಾಲಯ
ಬಸವ ಗಂಗೋತ್ರಿ, ಕುಂಬಳಗೋಡು - 560074
ಬೆಂಗಳೂರು ದಕ್ಷಿಣ ತಾಲ್ಲೋಕು. ದೂರವಾಣಿ : 9448386717/ 9845399698

ವಿಶ್ವಗುರು ಬಸವಣ್ಣನವರ
822ನೇ ಲಿಂಗೈಕ್ಯ ಸಂಸ್ಮರಣೆ
ಬಸವ ಪಂಚಮಿ ಕಾರ್ಯಕ್ರಮ

ದಿವ್ಯ ಸನ್ನಿಧಿ : ಪೂಜ್ಯ ಶ್ರೀಮನ್ ನಿರಂಜನ
ಮಹಾಜಗದ್ಗುರು ಡಾ.ಮಾತೆಮಹಾದೇವಿಯವರು
ಬಸವ ಧರ್ಮ ಪೀಠ, ಕೂಡಲ ಸಂಗಮ



30-07-2017, ದೇವ(ಭಾನು)ವಾರ,
ಬೆಳಿಗ್ಗೆ 10.30ಕ್ಕೆ

ಬೆಂಗಳೂರು ನಗರದ ಸಿಟಿ ಮಾರುಕಟ್ಟೆ ಪ್ರದೇಶದಲ್ಲಿರುವ
ಪುಟ್ಟಣ್ಣಚೆಟ್ಟಿ ಪುರಭವನ (ಟೌನ್‌ಹಾಲ್)ದಲ್ಲಿ

ಶರಣರ ಬರುವೆಮಗೆ ಪ್ರಾಣ ಜೀವಾಳ

ವಿಶ್ವಗುರು ಬಸವಣ್ಣನವರು ಮತ್ತು
ದಾಸೋಹ ಮೂರ್ತಿ ನೀಲಾಂಬಿಕಾ ತಾಯಿಯವರ
822ನೆಯ ಲಿಂಗೈಕ್ಯ ದಿನಾಚರಣೆ

ಸ್ಥಳ: ಪುಟ್ಟಣ್ಣಚೆಟ್ಟಿ ಪುರಭವನ (ಟೌನ್‌ಹಾಲ್), ಸಿಟಿ ಮಾರುಕಟ್ಟೆ, ಬೆಂಗಳೂರು

ದಿ.30-7-2017, ಭಾನು(ದೇವ)ವಾರ, ಬೆಳಿಗ್ಗೆ .10-30

ಶರಣ ಬಂಧುಗಳಲ್ಲಿ ಹೃತ್ಪೂರ್ವಕ ಬಿನ್ನಹ

ವಿಶ್ವಗುರು ಬಸವಣ್ಣನವರು ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯಾದಂದು ರೋಹಿಣಿ ನಕ್ಷತ್ರದಲ್ಲಿ ಜನಿಸಿ (30-4-1134) 62 ವರ್ಷ 3 ತಿಂಗಳು 2 ದಿವಸಗಳ ಕಾಲ ಇಳೆಯ ಮೇಲಿದ್ದು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ ಮಂಗಳ (ಬಸವ) ವಾರದಂದು ದಿ. 30-7-1196ರಂದು ಉರಿಯುಂಡ ಕರ್ಪುರದಂತೆ, ಸಮುದ್ರವನ್ನು ಬೆರೆತ ನದಿಯಂತೆ ಲಿಂಗೈಕ್ಯರಾಗಿ ದೇವನಲ್ಲಿ ಒಂದಾದರು. ಅವರು ಬಯಲಾದಂದಿನಿಂದಲೂ ಆ ದಿನವು **"ಬಸವ ಪಂಚಮಿ"** ಎಂದು ಖ್ಯಾತಿವೆತ್ತಿದೆ. ಈ ವರ್ಷ 822ನೆಯ ಲಿಂಗೈಕ್ಯ ದಿನವು ಶುಕ್ರ(ಮಾತೃ)ವಾರ, ದಿ.28-7-2017ರಂದು ಒದಗಿ ಬಂದಿದೆ. ಆದಿ ಪ್ರಮಥ, ಗಣಾಧಿಪತಿ ಬಸವಣ್ಣನವರು ಲಿಂಗೈಕ್ಯರಾದ ಮರು ದಿವಸ ದಾಸೋಹ ಮೂರ್ತಿ ನೀಲಾಂಬಿಕಾ ತಾಯಿಯವರು ಸಹ ಉರಿಯುಂಡ ಕರ್ಪುರದಂತೆ ಲಿಂಗೈಕ್ಯರಾದರು. ಅವರ 822ನೆಯ ಲಿಂಗೈಕ್ಯ ಸಂಸ್ಮರಣೆಯನ್ನು ಸಹ ಆಚರಿಸ ಲಾಗುತ್ತಿದೆ. ಪವಿತ್ರ ಹಬ್ಬಗಳಾದ ಬಸವ ಪಂಚಮಿ ಮತ್ತು ನೀಲಾಂಬಿಕಾ ಷಷ್ಠಿಯನ್ನು ಭಕ್ತಿ ಪೂರ್ವಕವಾಗಿ ಆಚರಿಸಬೇಕಾದುದು ನಮ್ಮೆಲ್ಲರ ಕರ್ತವ್ಯ.

* ಶುಕ್ರ(ಮಾತೃ)ವಾರ, ದಿ.28-7-2017ರಂದು ಬೆಳಿಗ್ಗೆ 8ರಿಂದ ಶ್ರೀ ಬಸವ ಪುತ್ಥಳಿಗೆ ವಿಶೇಷ ಪೂಜೆ ಮತ್ತು ಸಹಸ್ರ ಮಂತ್ರ ಪಠಣ. ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರಿಂದ.
* ಶನಿ (ಶರಣ)ವಾರ, ದಿ.29-7-2017ರಂದು ಬೆಳಿಗ್ಗೆ 10-30ರಿಂದ ನೀಲಾಂಬಿಕಾ ಷಷ್ಠಿಯ ನಿಮಿತ್ತ ಬಸವ ಮಂಟಪದಲ್ಲಿ ಸಾಮೂಹಿಕ ಇಷ್ಟಲಿಂಗಪೂಜೆ.
* ಭಾನು(ದೇವ)ವಾರ, ದಿ.30-7-2017ರಂದು ಬಸವ ಪಂಚಮಿ ನಿಮಿತ್ತ ಕೆ.ಪಿ.ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ 10-30ರಿಂದ ಸಭಾ ಕಾರ್ಯಕ್ರಮ.

ವಚನ ನೃತ್ಯ ರೂಪಕ

ಅತ್ಯಂತ ವಿಶೇಷವಾದ ವಚನ ನೃತ್ಯ ರೂಪಕಗಳನ್ನು ಏರ್ಪಡಿಸಲಾಗುವುದು. ವೈಭವಯುತವೂ ಅರ್ಥಗರ್ಭಿತವೂ ಆದ ನೃತ್ಯ ರೂಪಕಗಳು ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಲಿವೆ.

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಈ ಮೂರು ದಿನಗಳ ಕಾರ್ಯಕ್ರಮವನ್ನು, ಉಪನ್ಯಾಸ ಮತ್ತು ನಂತರ ಗಣ ಪ್ರಸಾದ (ಭೋಜನ) ವನ್ನು ವ್ಯವಸ್ಥೆ ಮಾಡಿದೆ. ಆದ್ದರಿಂದ ಎಲ್ಲಾ ಶರಣ ಬಂಧುಗಳು ಕುಟುಂಬ ಪರಿವಾರ ಸಹಿತವಾಗಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಈ ಎರಡೂ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದೇ ಅಲ್ಲದೆ ತನು-ಮನ-ಧನಗಳಿಂದ ಸಹಕರಿಸಿ ಕಾರ್ಯಕ್ರಮ ವ್ಯವಸ್ಥೆ ಮತ್ತು ಸಾಮೂಹಿಕ ಗಣ ಪ್ರಸಾದಕ್ಕಾಗಿ ಉದಾರವಾದ ದೇಣಿಗೆಯನ್ನು ಕೊಡಬೇಕೆಂದು ವಿನಂತಿಸುತ್ತೇವೆ.

ಶರಣ ಎಸ್. ಪುಟ್ಟರುದ್ರ, ಗೌರವಾಧ್ಯಕ್ಷರು,
ಲಿಂಗಾಯತ ಧರ್ಮ ಮಹಾಸಭಾ

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ
ಉಪಾಧ್ಯಕ್ಷರು, ಬಸವ ಮಂಟಪ

ನೀಲಾಂಬಿಕಾ ಷಷ್ಠಿ - ದಿ.29-7-2017ರಂದು
ರಾಜಾಜಿ ನಗರದ ಬಸವ ಮಂಟಪದಲ್ಲಿ

ಪರಮ ದಾಸೋಹವನು ನೆರೆ ಮಾಡಿ ಜಂಗಮದ
ಪರಮ ಪ್ರಸಾದವನು ಸವಿದು ಸುಖಿದಿ ಕರದಿಷ್ಟಲಿಂಗದೊಳು ಶರೀರವನಿಂಬಿಟ್ಟ
ಕರುಣೆ ನೀಲಮ್ಮ ಶರಣು ಯೋಗಿನಾಥ

ತಾಯಿ ನೀಲಾಂಬಿಕೆಯವರು ಅಸಾಮಾನ್ಯ ಯೋಗಿಣಿ. ಇಚ್ಛಾಮರಣಿಯಾಗಿ ಶ್ರೀ ಗುರು ಬಸವಣ್ಣನವರು ಲಿಂಗೈಕ್ಯರಾದ ಮರುದಿವಸ ಅವರು ಕರದಿಷ್ಟ ಲಿಂಗದ ಪೂಜೆ ಮಾಡುತ್ತ ಲಿಂಗೈಕ್ಯರಾದರು. ಈ ನಿಮಿತ್ತ ದಿ. 29-7-2017ರಂದು 822ನೆಯ ನೀಲಾಂಬಿಕಾ ಷಷ್ಠಿಯನ್ನು ಬೆಳಿಗ್ಗೆ 10-30 ರಿಂದ ಬೆಂಗಳೂರಿನ ರಾಜಾಜಿನಗರದ ಬಸವ ಮಂಟಪದಲ್ಲಿ ಸಾಮೂಹಿಕ ಇಷ್ಟಲಿಂಗ ಪೂಜೆಯೊಡನೆ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಸನ್ನಿಧಿಯಲ್ಲಿ ಆಚರಿಸಲಾಗುತ್ತಿದೆ. ಪೂಜಾ ಸಾಮಗ್ರಿಗಳೊಡನೆ ಬಂದು ಶರಣರು ಭಾಗವಹಿಸಬೇಕು.

ಪರ ಊರುಗಳಿಂದ ಬರುವವರಿಗೂ ಸಹ ಬಸವ ಮಂಟಪದಲ್ಲಿ ವಸತಿ-ಊಟದ ವ್ಯವಸ್ಥೆ ಇರುವುದರಿಂದ ಆಗಮಿಸಿ ಬಸವ ಪಂಚಮಿ ಉತ್ಸವದಲ್ಲಿ ಭಾಗಿಗಳಾಗಲು ಕೋರುತ್ತೇವೆ.ಬಸ್ಸುಗಳಲ್ಲಿ ಬರುವವರು ರಾಜಾಜಿನಗರದ ನವರಂಗ್ ಟಾಕೀಸ್ ಬಳಿ ಇಳಿದರೆ ಬಸವ ಮಂಟಪವನ್ನು 10 ನಿಮಿಷದಲ್ಲಿ ತಲುಪಬಹುದು, ಬಸವ ಮಂಟಪವು ರಾಜಾಜಿನಗರದ 2ನೆಯ ಬ್ಲಾಕಿನಲ್ಲಿ 20ನೆಯ ಮುಖ್ಯರಸ್ತೆಯಲ್ಲಿ (ಸಿಟಿ ಆಸ್ಪತ್ರೆ ಪಕ್ಕ) ಇದೆ.

ವಿಶೇಷ ಮನವಿ :- ಸಾಮಾನ್ಯವಾಗಿ ಅನೇಕರು ಭಾನುವಾರಗಳನ್ನು ಶರಣರ ಜಯಂತಿ, ಲಿಂಗೈಕ್ಯ ಸಂಸ್ಮರಣೆ ಮಾಡಲು ಆಯ್ಕೆ ಮಾಡಿಕೊಳ್ಳುತ್ತಾರೆ. ಮಹಾನುಭಾವರಿಗೆ ಗೌರವ ತೋರಿಸಲು ನಾವು ಅಂದಂದೇ ಮಾಡಬೇಕು. ಒಂದು ರಜೆಯನ್ನು ಸಹ ಹಾಕಲಾರದ ಮನೋಭಾವ ಸರಿಯಲ್ಲ; ಅಂದು ಒಂದು ದಿವಸವಾದರೂ ಅಂಗಡಿ ಮುಚ್ಚಿ ಮಹಾತ್ಮರಿಗೆ ಗೌರವ -ಕೃತಜ್ಞತೆ ಸಲ್ಲಿಸಬೇಕು ಎಂಬ ಮನೋಭಾವ ಹೊಂದದೆ ಇರುವುದು ಸೂಕ್ತವಲ್ಲ. ಧರ್ಮಕ್ಕಾಗಿ ತನು-ಮನ-ಧನಗಳನ್ನು ಮಾತ್ರವಲ್ಲದೆ ಅಭಿಮಾನ- ಸಮಯ- ಪ್ರಾಣಗಳನ್ನೂ ಮೀಸಲಿಡಬೇಕು. ಬಸವ ಪಂಚಮಿ ಶುಕ್ರವಾರ ಬಂದಿದ್ದು ರಜಾದಿನ ಅಲ್ಲದಿದ್ದರೂ ಹೆಚ್ಚಿನ ಸಂಖ್ಯೆಯಲ್ಲಿ ಸಹೃದಯರು ಭಾಗವಹಿಸಿ ಕಾರ್ಯಕ್ರಮಕ್ಕೆ ಶೋಭೆ ತರಬೇಕೆಂದು ಕೋರುತ್ತೇವೆ.

ಹಾಲು ಹಣ್ಣು ವಿತರಣೆ

ನಾಗರ ಪಂಚಮಿ ಎಂದು ಹುತ್ತಕ್ಕೆ, ನಾಗರ ಕಲ್ಲಿಗೆ ಹಾಲು ಎರೆಯುವ ಮೂಢ ಸಂಪ್ರದಾಯ ಬಿಟ್ಟು ಮಾನವೀಯ ಕಾರ್ಯಕ್ಕೆ ಅದನ್ನು ಬಳಸಬೇಕೆಂದು ರಾಷ್ಟ್ರೀಯ ಬಸವ ದಳದ ವತಿಯಿಂದ ಆಸ್ಪತ್ರೆಗಳಲ್ಲಿ ಹಣ್ಣು- ಹಾಲು ವಿತರಿಸುವ ಕಾರ್ಯಕ್ರಮವನ್ನು ಸಂಯೋಜಿಸಲಾಗಿದೆ.

ಬಸವ ಮಂಟಪಕ್ಕೆ ಬಸ್ ಮಾರ್ಗ
ಮೆಜೆಸ್ಟಿಕ್‌ನಿಂದ
251,80ಎ, 265, 80ಇ
ರೂಟಿನ ಸಿಟಿ ಬಸ್ಸುಗಳು ಬರುತ್ತವೆ.

ಕಾರ್ಯಕ್ರಮ ವ್ಯವಸ್ಥಾಪಕರು :
ವಿಶ್ವ ಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ, 2035, 20ನೆಯ ಮೇನ್
2ನೆಯ ಬ್ಲಾಕು, ರಾಜಾಜಿನಗರ,
ಬೆಂಗಳೂರು-560010

ಸಂಪಾದಕೀಯ

1. ಕೇಂದ್ರ ಸರ್ಕಾರದ ದಿಟ್ಟ ನಿರ್ಧಾರ ಅಭಿನಂದನಾರ್ಹ



ಜನಪ್ರಿಯ ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರದ ಮಾಂಸಕ್ಕಾಗಿ ಗೋವುಗಳ ಮಾರಾಟ ನಿಷೇಧಿಸಿದೆ. ಇದು ದೇಶದಾದ್ಯಂತ ಪರ–ವಿರೋಧದ ಚರ್ಚೆಯನ್ನು ಹುಟ್ಟುಹಾಕಿದೆ. ಮಾಂಸದಂಥೆ ಹೆಸರಿನಲ್ಲಿ ಕೋಟ್ಯಾಂತರ ಗೋವುಗಳು ಕಸಾಯಿಖಾನೆ ಸೇರುತ್ತಿವೆ. ಇವನ್ನು ರಕ್ಷಿಸಬೇಕು ಎಂದು ಸುಪ್ರೀಂ ಕೋರ್ಟ್ ಸಹ ಆದೇಶ ನೀಡಿದೆ.

ಭಾರತ ಕೃಷಿ ಪ್ರಧಾನ ದೇಶ. ಇದು ಗ್ರಾಮಗಳ ದೇಶವೂ ಅಹುದು ಹಸು, ಎತ್ತುಗಳ, ಎಮ್ಮೆ, ಕೋಣಗಳ ಮೇಲೆ ಕೃಷಿ ಆಧಾರಿತವಾಗಿದೆ. ವಿದೇಶಿಯರ ಒಡಲೆಂಬ ಸ್ಮಶಾನವನ್ನು ತುಂಬುವ ಕಸಾಯಿಖಾನೆಗಳು ನಮ್ಮ ದೇಶದಾದ್ಯಂತ ವಿಸ್ತರಿಸಿ ಲಕ್ಷಾಂತರ ಗೋವುಗಳು, ಕರುಗಳು ದಿನ ವಿಡೀ ಬಲಿಯಾಗುತ್ತಿವೆ. ಅತ್ಯಂತ ದಾರುಣವಾಗಿ ಗೋವುಗಳು ಕೊಲ್ಲಲ್ಪಡುತ್ತವೆ. ವಿದೇಶಿ ತಳಿಯ ಹಸುಗಳ ಗಂಡುಕರುಗಳನ್ನು ನಿರ್ದಯವಾಗಿ ಕೊಲ್ಲಲಾಗುತ್ತದೆ. ಆಂಧ್ರ ಪ್ರದೇಶದ ರುದ್ರಪಟ್ಟಣದ ಬಳಿ ಅರಬ್ ದೇಶದವರು ಯಾಂತ್ರಿಕೃತ ಕಸಾಯಿಖಾನೆ ಆರಂಭವಾಗುವಾಗ ತೀವ್ರ ಪ್ರತಿಭಟನೆ ನಡೆಯಿತು. ಅದರಲ್ಲಿ ನಾವು, ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸವಾಮಿಗಳು, ಪೂಜ್ಯ ದಯಾನಂದ ಸ್ವಾಮಿಗಳು ಭಾಗವಹಿಸಿದ್ದೆವು. ಆದರೆ ಅಂದಿನ ಕಾಂಗ್ರೆಸ್ ಸರಕಾರ ಪೋಲೀಸ್ ಭದ್ರತೆಯಲ್ಲಿ ಯಾಂತ್ರಿಕ ಕಸಾಯಿಖಾನೆ ಪ್ರಾರಂಭಕ್ಕೆ ಅನುಮತಿ ನೀಡಿತು. ಇದೀಗ, ಅಹಿಂಸಾ ತತ್ತ್ವವನ್ನು ಪ್ರತಿಪಾದನೆ ಮಾಡಿದ ಬುದ್ಧ, ಮಹಾವೀರ, ಬಸವಣ್ಣ ಇವರ ದೇಶದಲ್ಲಿ ಶ್ರೀ ನರೇಂದ್ರ ಮೋದಿ ಸರ್ಕಾರ ದಿಟ್ಟ ಹೆಜ್ಜೆಯನ್ನಿಟ್ಟಿದೆ. ಎಲ್ಲ ವಿಷಯ ಕುರಿತು ಪರ–ವಿರೋಧ ಅಭಿಪ್ರಾಯ ಇರುವುದು ಸತ್ಯ. ಹಾಗಂತ ಆದರ್ಶಗಳ ಅನುಷ್ಠಾನಕ್ಕೆ ಸರ್ಕಾರಗಳು ಹಿಂಜರಿಯಬಾರದು.

ಭಾರತದ ಸುಮಾರು 40 ಕೋಟಿ ಎಕರೆ ಕೃಷಿ ಕಾರ್ಯಕ್ಕೆ ಗೋವುಗಳೇ ಪ್ರಮುಖ ಸಾಧನ. ವ್ಯವಸಾಯಕ್ಕೆ ಬೇಕಾಗುವ ಹೆಚ್ಚಿನ ಶಕ್ತಿಯನ್ನು ಎತ್ತುಗಳೇ ಕೊಡುತ್ತಿವೆ. ಇಂದಿಗೂ ಇಲ್ಲಿಯ ಶೇ 65ರಷ್ಟು ಭೂಮಿಯನ್ನು ಈ ದೇಶದ ಗೋವುಗಳೇ ಉಳುತ್ತವೆ. ಹೀಗಾಗಿ ಗ್ರಾಮಭಾರತದ ಅರ್ಥ ವ್ಯವಸ್ಥೆ ಗೋವಿನ ಮೇಲೆ ಅವಲಂಬಿತವಾಗಿದೆ.

ಸಮೀಕ್ಷೆಯೊಂದರ ಪ್ರಕಾರ ಈ ದೇಶದಲ್ಲಿ ಸುಮಾರು 7ಕೋಟಿ 40ಲಕ್ಷ ಎತ್ತುಗಳು ಮತ್ತು ಸುಮಾರು 2ಕೋಟಿ ಎತ್ತಿನ ಗಾಡಿಗಳು ಕೃಷಿಯ ಅವಿಭಾಜ್ಯ ಅಂಗವಾಗಿದೆ. ಒಂದು ವರ್ಷದಲ್ಲಿ ರೇಲ್ವೆ ಸಾಗಿಸುವ ಸರಕುಗಳ ಒಟ್ಟು ತೂಕಕ್ಕಿಂತ ಐದು ಪಟ್ಟು ಹೆಚ್ಚು ತೂಕವನ್ನು ಜಾನು ವಾರುಗಳೇ ಸಾಗಿಸುತ್ತವೆ.

ದೇಶೀಯ ಗೋವಿನ ಹಾಲು, ಬಹಳ ಪೌಷ್ಠಿಕಾಂಶಗಳಿಂದ ಕೂಡಿದ್ದರೆ, ಅದರ ತುಪ್ಪ ಅತ್ಯಂತ ರುಚಿಕರ. ಗೋಮೂತ್ರದ ವೈಶಿಷ್ಟ್ಯ ಕುರಿತು ಬಗೆಬಗೆಯಿಂದ ಬಣ್ಣಿಸಲಾಗುತ್ತಿದೆ. ಸಗಣಿಯಿಂದ ಗೊಬ್ಬರವನ್ನು ಮಾಡಿ ಸಾವಯುವ ಕೃಷಿಗೆ ಬಳಸಲಾಗುತ್ತಿದೆ. ತಟ್ಟಿದ ಬೆರಣಿ ಹಳ್ಳಿಗಳಲ್ಲಿ ಇಂದಿಗೂ ಬಳಕೆಯಾಗುತ್ತಿದೆ. ಸಗಣಿಯಿಂದ ಬಯೋಗ್ಯಾಸನ್ನು ಉತ್ಪಾದಿಸಿ ಇದರಿಂದ ಸಿಗುವ ಮೀಥೇನ್ ಅನಿಲದಿಂದ ದೀಪ, ಒಲೆ ಉರಿಸಬಹುದು.

ಹಾಲು ಕೊಡದ ಮುದಿ ಗೋವುಗಳನ್ನು, ಮುಪ್ಪಾದ ಮುದಿ ಎತ್ತುಗಳನ್ನು ಸಾಕಿದರೆ ಸಹ ಏನು ನಷ್ಟವಾಗದು. ಏಕೆಂದರೆ ಅವುಗಳ ಸಗಣಿಯಿಂದ ಸಾಕಷ್ಟು ಉಪಯೋಗ ಪಡೆಯಬಹುದು. (ನನಗೆ ನೆನಪಿದೆ ನಮ್ಮ ಹಳ್ಳಿಗೆ ಹೋದಾಗ ಒಂದು ಎತ್ತು ಸತ್ತಿತ್ತು. ಅದನ್ನು ಕಟುಕರಿಗೆ ಕೊಡದೆ ಮನೆಯ ಮಂದಿ ಸತ್ತಾಗ ಅವರಿಗೆ ಮಾಡುವಂತೆ ಶವ ಸಂಸ್ಕಾರ ಮಾಡಿ ಸಮಾಧಿ ಮಾಡಿದರು)

ಹೀಗೆ ಬಹು ಉಪಯುಕ್ತವಾದ ಗೋ ವಂಶವನ್ನು ಕಾಪಾಡಿಕೊಳ್ಳುವುದು ಮತ್ತು ಬೆಳೆಸುವುದು ಇಂದಿನ ಅವಶ್ಯಕತೆಯಾಗಿದೆ. ಗ್ರಾಮೀಣ ಜನರು ಮಳೆಯ ಕೊರತೆ, ಬರಗಲದಿಂದ ಮತ್ತಯ ಯಾಂತ್ರೀಕೃತ ಕಸಾಯಿಖಾನೆಯವರು ಕೊಡುವ ಹೆಚ್ಚಿನ ಹಣದ ಆಮಿಷದಿಂದ ತರುಣ ಎತ್ತುಗಳನ್ನೇ ಮಾರುವ ಸಂಭವವುರುತ್ತದೆ. ಭಾರತದಿಂದ ರಫ್ತಾಗುವ ಗೋಮಾಂಸಕ್ಕೆ ಕೆಲವು ದೇಶಗಳವರು ಬಹಳ ಇಷ್ಟಪಡುವಂತೆ ಅವರಿಗಾಗಿ ದಷ್ಟಪುಷ್ಟವಾದ ತರುಣ ಗೋವು ಮತ್ತು ಎತ್ತುಗಳನ್ನು ಕೊಲ್ಲುವುರು. ಅಂದರೆ ವಿದೇಶಿಯರ ಒಡಲು ತುಂಬಲು ನಮ್ಮ ದೇಶದ ಗೋ ಸಂಪತ್ತು ಸೂರೆಯಾಗುತ್ತದೆ.

ವಿದೇಶಿ ತಳಿಗಳಾದ ಜರ್ಸಿ, ಹೋಲ್‌ಸ್ಟೇನ್, ರೆಡ್‌ಡೇನ್ ಮುಂತಾದವು ನಮ್ಮ ದೇಶದಲ್ಲಿ ಕಾಲಿಟ್ಟ ಮೇಲೆ ದೇಶಿಯ ತಳಿಗಳ ಬಗ್ಗೆ ಜನರು ಉದಾಸೀನ ಮಾಡತೊಡಗಿದರು. ಈಗೀಗ ದೇಶಿಯ ತಳಿಯ ಹಾಲಿನ ಮಹತ್ವ ತಿಳಿಯತೊಡಗಿ ಅವುಗಳ ಪುನರುಜ್ಜೀವನ ಪ್ರಾರಂಭವಾಗಿರುವುದು ಒಂದು ದೃಷ್ಟಿಯಿಂದ ಒಳ್ಳೆಯ ಲಕ್ಷಣ. ಆದ್ದರಿಂದ ಮಾಂಸಕ್ಕಾಗಿ ಗೋವುಗಳ ಮಾರಾಟ ನಿಷೇಧಿಸಿರುವ ಎಂದ ಮಾತ್ರಕ್ಕೆ ಕೇಂದ್ರ ಸರ್ಕಾರವು ಮುಂದಿಟ್ಟ ಹೆಜ್ಜೆಯನ್ನು ಹಿಂದಕ್ಕಿಡಬಾರದು ಎಂಬುದು ನಮ್ಮ ಆಶಯ.

2. ಪ್ರಭಾಕರ್ ಕೋರೆ ಮತ್ತು ಮಠಾಧಿಪತಿಗಳ ಕುರಿತು ಅವರ ದ್ವೇಷ

ಪೂನಾ ನಗರದಲ್ಲಿ ದಿ. 25–05–2017ರಂದು ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ಕುರಿತು ಚರ್ಚಿಸಲು ಒಂದು ಸಭೆ ಸೇರಿತು. ಮಹಾರಾಷ್ಟ್ರದ ಉತ್ತಮ ಸಂಘಟಕ ಅವಿನಾಶ ಬೋಶಿಕರ್ ಈ ಸಭೆ ಸೇರಿಸಿದವರು. ಇದರಲ್ಲಿ ಪೂನಾದ ಲಿಂಗಾಯತ ಪ್ರಮುಖರು ಪೂನಾ ರಾಷ್ಟ್ರೀಯ ಬಸವ ದಳ ಸದಸ್ಯರು ಎಲ್ಲರೂ ಭಾಗವಹಿಸಿದ್ದರು. ಬೆಳಗಾವಿಯ ಕರ್ನಾಟಕದ ಲಿಂಗಾಯತ್ ಎಜುಕೇಷನ್ ಸೊಸೈಟಿಯ ಅಧ್ಯಕ್ಷರಾದ ಶ್ರೀ ಪ್ರಭಾಕರ್ ಕೋರೆ ಆಮಂತ್ರಿತ ಸಭಾಧ್ಯಕ್ಷರಾಗಿದ್ದರು. ಅವರ ಭಾಷಣದಲ್ಲಿ ಎರಡು ಅಂಶಗಳು

ವಿಮರ್ಶೆಗೆ ಭಾಜನವಾಗುತ್ತವೆ. ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ಪಡೆಯುವ ಹೋರಾಟದಲ್ಲಿ ಮಠಾಧಿಪತಿಗಳು, ಕಾವಿಧಾರಿಗಳಾದ ಯಾರನ್ನು ಸೇರಿಸಿಕೊಳ್ಳಬಾರದು. ಅದರಲ್ಲೂ ಕರ್ನಾಟಕದ ಮಠಾಧಿಪತಿಗಳನ್ನು ತೆಗೆದುಕೊಳ್ಳಬಾರದು ಎಂದು ಹೇಳಿದರು. ಇವರ ಕೆ.ಎಲ್.ಇ ಸಂಸ್ಥೆ ವಿದ್ಯಾಸಂಸ್ಥೆಗಳನ್ನು ತೆರದಿದೆ ನಿಜ; ಇದೇ ರೀತಿ ಎಷ್ಟು ಜನ ಮಠಾಧಿಪತಿಗಳು ವಿದ್ಯಾಸಂಸ್ಥೆ ನಡೆಸುತ್ತಿಲ್ಲ? ಕೆ.ಎಲ್.ಇ ಸಂಸ್ಥೆ ಮಾಡದಿರುವ ದಾಸೋಹ ಮತ್ತು ಬಡ ಮಕ್ಕಳಿಗೆ ವಿದ್ಯಾದಾನ ಮಾಡುವ ಕೈಂಕರ್ಯವನ್ನು ಎಷ್ಟೋ ಮಠಗಳು ಮತ್ತು ಮಠಾಧಿಪತಿಗಳು ನಡೆಸುತ್ತಿದ್ದಾರೆ.

ಲಿಂಗಾಯತ ಒಂದು ಜಾತಿಯಲ್ಲ; ಧರ್ಮ. ಸ್ವತಂತ್ರ ಧರ್ಮ ಎಂಬುದನ್ನು ತಿಳಿಸಿದ್ದೇ ಪೂಜ್ಯ ಲಿಂ॥ ಜಗದ್ಗುರು ಲಿಂಗಾನಂದ ಸ್ವಾಮಿಗಳು ಮತ್ತು ನಾನು. ಇದರ ಪ್ರಚಾರ ಮತ್ತು ಜನಜಾಗೃತಿ ಮಾಡಿದೆವು. ನಾವು ಮತ್ತು ನಮ್ಮ ಧರ್ಮ ಪೀಠದ ಜಂಗಮಮೂರ್ತಿಗಳು ಶ್ರೀಅವಿನಾಶ ಬೋಶಿಕರ್ ಅವರ ಆಗ್ರಹದಂತೆ ಕೂಡಲ ಸಂಗಮದಲ್ಲಿ ಒಂದು ಸಭೆ ಕರೆದಾಗ ಬಾಲ್ಕಿಯ ಹಿರೇಮಠದ ಪೂಜ್ಯ ಶ್ರೀ ಬಸವಲಿಂಗ ಸ್ವಾಮಿಗಳು ಪೂಜ್ಯ ಕೋರಣೇಶ್ವರ ಸ್ವಾಮಿಗಳು, ಕೂಡಲ ಸಂಗಮದ ಪಂಚಮಸಾಲೆ ಲಿಂಗಾಯತ ಮಠದ ಪೂಜ್ಯ ಶ್ರೀ ಜಗದ್ಗುರು ಬಸವ ಜಯಮೃತ್ಯುಂಜಯ ಸ್ವಾಮಿಗಳು, ಅಹಮದ್ ನಗರದ ಪೂಜ್ಯ ಶ್ರೀ ಶಿವಲಿಂಗಶಿವಾಚಾರ್ಯರು ಬೆಳಗಾವಿ ನಾಗನೂರು ಮಠದ ಪೂಜ್ಯ ಶ್ರೀ ಸಿದ್ಧರಾಮ ಸ್ವಾಮಿಗಳು ಈ ವಿಷಯದಲ್ಲಿ ಭಾಗವಹಿಸಿದ್ದರು. ಮಠಾಧಿಪತಿಗಳನ್ನು ಒಳಗೆ ತೆಗೆದುಕೊಳ್ಳಬೇಡಿ ಎಂದು ಅವಿನಾಶ್ ಅವರಿಗೆ ಶ್ರೀ ಪ್ರಭಾಕರ್ ಕೋರೆ ಸಲಹೆ ಕೊಟ್ಟಿದ್ದು ಸರಿಯೆ? ಇದು ಅವರ ಕಲುಷಿತ ಮನಸ್ಸನ್ನು, ದುರಹಂಕಾರವನ್ನು ಪ್ರದರ್ಶಿಸುತ್ತದೆಯಲ್ಲದೆ?

ಮಠಾಧಿಪತಿಗಳು ಏಳಿ, ಎದ್ದೇಳಿ

ಶ್ರೀ ಪ್ರಭಾಕರ ಕೋರೆ ಹೀಗೆ ಹೇಳಿದ್ದರೆ ಹಿಂದೆ ಇರಬಹುದಾದ ವಿಷಯವನ್ನು ಚಿಂತಿಸೋಣ. ನಮ್ಮ ಮಠಾಧಿಪತಿಗಳಲ್ಲಿ ಐಕ್ಯತೆ ಇಲ್ಲ ಮಾತ್ರವಲ್ಲ ಇವರು ಸಮಾಜೋಧಾರ್ಮಿಕ ಸಮಸ್ಯೆಗಳಿಗೆ ಸ್ಪಂದಿಸುವುದೇ ಇಲ್ಲ. ತಾವಾಯ್ತು ತಮ್ಮ ಮಠದ ಸ್ಥಾಪಕರ ಗದ್ದುಗೆಯ ವೈಭವೀಕರಣ ಆಯ್ತು. ತಮ್ಮ ತಮ್ಮ ಮಠಗಳನ್ನು ಅಭಿವೃದ್ಧಿ ಪಡಿಸಲು ಹೆಣಗಾಡುವ ಸರ್ಕಾರದ ಇವರು ಸಮಾಜದ, ಧರ್ಮದ ಸಮಸ್ಯೆಗಳ ಬಗ್ಗೆ ಚಿಂತಿಸುವುದಿಲ್ಲ ; ಅಂಥ ಪ್ರಸಂಗ ಬಂದಾಗ ಹೋರಾಡುವುದಿಲ್ಲ. ಈ ಕ್ಲೈಬ್ಯವನ್ನು ಕಂಡೇ ಪ್ರಭಾಕರ್ ಕೋರೆ ಹೀಗೆ ಮಾತನಾಡಿದ್ದಾರೋ ಅಥವಾ ಮಠಾಧಿಪತಿಗಳನ್ನು ಕುರಿತು ಈರ್ಷೆ, ತಿರಸ್ಕಾರವೋ ತಿಳಿಯದು.

ದಿ. 28-05-2017 ರಂದು ಶ್ರೀ ಜ್ಯೋತಿ ಪ್ರಕಾಶ ಮಿರ್ಜಿಯವರು ಬೆಂಗಳೂರಿನಲ್ಲಿ ಒಂದು ಬೃಹತ್ ಸಮಾವೇಶಕ್ಕೆ ಕರೆಕೊಟ್ಟಿದ್ದರು. ಅವರು ನಿರೀಕ್ಷಿಸಿದಷ್ಟು ಜನರು ಸೇರಲಿಲ್ಲವೆಂದು ನಿರಾಶೆಯ ಮಾತನಾಡಿದರು ಒಂದು ಸಮಾಧಾನಕ ಅಂಶವೆಂದರೆ ಆ ಸಭೆಯಲ್ಲಿ ವಿರಕ್ತ ಮಠಾಧೀಶರಾರೂ ಭಾಗವಹಿಸಲಿಲ್ಲ. ಏಕೆಂದರೆ ಅದು ವೀರಶೈವವಾದಿಗಳ

ಸಭೆಯಾಗಿತ್ತು. ವಿಶ್ವಗುರು ಬಸವಣ್ಣನವರೇ ನಮ್ಮ ಧರ್ಮಗುರು, ವಚನ ಸಾಹಿತ್ಯವೇ ನಮ್ಮ ಧರ್ಮಸಂಹಿತೆ ಎಂದು ನಂಬುವುದು ಲಿಂಗಾಯತ ಧರ್ಮ. ವಿರಕ್ತ ಮಠಾಧೀಶರಲ್ಲಿ ಇಷ್ಟಾದರೂ ಜಾಗೃತಿ ಉಂಟಾಗಿರುವುದು ಸಮಾಧಾನಕರ ಅಂಶ. ಆದ್ದರಿಂದ ಈಗ ವಿರಕ್ತ ಮಠಾಧೀಶರು, ಬಸವ ಸಂಪ್ರದಾಯದ ಎಲ್ಲ ತ್ಯಾಗಿಗಳು, ಬಸವ ತತ್ತ್ವಾಭಿಮಾನ ಸಂಘ-ಸಂಸ್ಥೆಗಳೂ ಒಟ್ಟಾಗಿ ಈಗ ಲಿಂಗಾಯತ ಧರ್ಮದ ಮಾನ್ಯತೆಗಾಗಿ ಪ್ರಯತ್ನಿಸಬೇಕು. ಈ ಒಗ್ಗಟ್ಟು ಸ್ಥಾಪಿಸಿದಿದ್ದರೆ ಶ್ರೀ ಪ್ರಭಾಕರ ಕೋರೆಯವರಂಥ ಗಣ್ಯರ ತಿರಸ್ಕಾರಕ್ಕೆ ಮಠಾಧೀಶರು ಪಾತ್ರರಾಗಬೇಕಾಗುತ್ತದೆ.

ಪ್ರಭಾಕರ ಕೋರೆಯವರು ಇನ್ನೊಂದು ಕರೆಯನ್ನು ನೀಡಿದ್ದಾರೆ. ಅದೆಂದರೆ "ಇಷ್ಟಲಿಂಗ ಕಟ್ಟಿಕೊಳ್ಳಲು ಯಾರಿಗೂ ಹೇಳಬಾರದು." ಎಂಬುದು. ಮುಂದುವರಿದು "ನಾನೂ ಕಟ್ಟಿಲ್ಲ, ನನ್ನ ಮಕ್ಕಳು ಕಟ್ಟಿದಲ್ಲ". ಎಂದು ಹೇಳಿದ್ದಾರೆ. ಇದೊಂದು ದೊಡ್ಡ ಆದರ್ಶವೆ? ಇಷ್ಟಲಿಂಗ ಲಿಂಗಾಯತ ಧರ್ಮದ ಜೀವಾಳ. ತಾವು ಮಹತ್ತರವಾದ ತಪ್ಪು ಮಾಡುತ್ತಿರುವುದಲ್ಲದೆ ಅದನ್ನು ಹೆಮ್ಮೆಯಿಂದ ಹೇಳಿಕೊಳ್ಳುವುದು ನಾಚಿಕೆಗೇಡಿನ ವಿಷಯವಲ್ಲವೆ? ಮಹಾರಾಷ್ಟ್ರದಲ್ಲಿ ಲಿಂಗಾಯತರು ತುಂಬಾ ಅಭಿಮಾನದಿಂದ ಇಷ್ಟಲಿಂಗ ಕಟ್ಟಿಕೊಳ್ಳುತ್ತಾರೆ. ಅವರ ಮುಂದೆ ಕರ್ನಾಟಕದ ಪ್ರಭಾಕರ ಕೋರೆಯವರು ಇಂಥ ಕರೆಕೊಟ್ಟಿರುವುದು. ಕರ್ನಾಟಕದ ಇಡೀ ಲಿಂಗಾಯತ ಧರ್ಮ ಮತ್ತು ಸಮಾಜಕ್ಕೆ ಅಪಮಾನಕರ! "ತಾನು ಕೆಡೋದಲ್ಲದೆ ಕೋತಿ ವನವನ್ನೆಲ್ಲ ಕೆಡಿಸಿತು ಎಂಬಂತೆ ಲಿಂಗಾಯತ ಮುಖಂಡರು ಇಂಥ ಕರೆಕೊಡುವುದು ಸರಿಯೆ? ಇವರನ್ನು ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ಪಡೆಯಲು ಅವಿನಾಶ ಬೋಶಿಕರ ಅಂಥವರು ರೂಪಿಸಿರುವ ಲಿಂಗಾಯತ ಸಮನ್ವಯ ಸಮಿತಿಗೆ ಅಧ್ಯಕ್ಷರನ್ನಾಗಿ ಮಾಡಲು ಯತ್ನಿಸಿದ್ದು ನಾಚಿಕೆಗೇಡಿನ ವಿಷಯ. ಪುಣ್ಯಕ್ಕೆ ರಾಜಕೀಯದಲ್ಲಿ ಇರುವ ಪ್ರಭಾಕರ ಕೋರೆಯವರು ಅಧ್ಯಕ್ಷರಾಗಲು ಒಪ್ಪದಿರುವುದು ಒಂದು ದೃಷ್ಟಿಯಿಂದ ಸಮಾಧಾನಕರ ಅಂಶ.

ಅಕ್ಕನ ಅಮರವಾಣಿ

ಭಾಗ- 41 — ಮಾತಾಜಿ

402. ಅಂಗದಲ್ಲಿ ಲಿಂಗ ಸ್ಥಾಪನೆ

ಲಿಂಗಾದಿ ಮಧ್ಯದಲ್ಲಿ
ಇಂಗಿತವನರಿದಗಲ್ಲದೆ
ಅಂಗದೊಳಗೆ ಲಿಂಗದಂಗಸಂಗವಾಗದು ॥ಪಲ್ಲವಿ॥

ಜೀವವಾದಿ ಬಿಂದುವನ್ನು
ತೀವಿ ಊರ್ಧ್ವಮುಖವ ಮಾಡಿ।
ಓವಿದಕ್ಷರದಲಿ ಕೂಡಿಬಿಡದೆ ಅನುದಿನ
ಕಾಲವೈರಿಯಾದ ಶಿವನ
ಭಾವದೊಳಗೆ ಬೆರೆಯಬಲ್ಲ।
ಸಾವಧಾನಿಗಲ್ಲದೆ ಲಿಂಗ ಸಾಧ್ಯವಾಗದು॥ ॥ ೧ ॥

ಹಲವು ದರ್ಶನದೊಳಗೆ ಪೊಕ್ಕು।
ಒಲವ ನುಡಿವ ಆತ್ಮನಿಪ್ಪ
ನೆಲೆಯನರಿದು ಮನವ ಮಾರುತನೊಂದುಗೂಡಿಸಿ॥
ಉಲಿವ ನಾದವೇದಗತಿಗೆ
ತೊಲಗಲೊತ್ತಿ ತನುಗುಣಗಳ
ಗೆಲಿದ ಮಹಿಮಗಲ್ಲದೆ ಲಿಂಗದೊಲುಮೆಯಾಗದು ॥ ॥ ೨ ॥

ರೂಪ ಚಕ್ರದೊಳಗೆ ವಿಶ್ವ
ರೂಪ ಧರಿಸಿ ತೋರುತಿಹ ಚಿದ್
ರೂಪನೆನಿಪ ಘನಮಹಾತ್ಮ ಚೆನ್ನಮಲ್ಲನದೇವನ ॥
ರೂಪಿನೊಳಗೆ ಹೊಕ್ಕು ಸಕಲ।
ರೂಪನಳಿಯಬಲ್ಲ ಜ್ಞಾನ।
ದೀಪಿತಾಂಗಗಲ್ಲದೆ ಲಿಂಗಸ್ಥಾಪ್ಯವಾಗದು॥ ॥ ೩ ॥

ಮಾನವನ ಜೀವೋತ್ಪತ್ತಿಗೆ ಕಾರಣವಾದ ವೀರ್ಯ ಶಕ್ತಿಯು ಅಧೋಮುಖವಾಗಿ ಹರಿಯುತ್ತದೆ. ಅದನ್ನು ಮೇಲ್ಮುಖವಾಗಿ ಮಾಡಿ, ಪವಿತ್ರ ಅಕ್ಷರವಾದ ಓಂಕಾರವನ್ನು ಪ್ರತಿದಿನವನ್ನು ಬಿಡದೆ ಸತತವಾಗಿ ಜಪಿಸುತ್ತ, ಕಾಲದ ಬಲೆಗೆ ಸಿಲುಕದ ಪರಮಾತ್ಮನನ್ನು ಭಾವದೊಳಗೆ ಬೆರೆಯಬಲ್ಲ ಸಾಧಕನಿಗಲ್ಲದೆ ಲಿಂಗಾನುಭವ ಸಾಧ್ಯವಾಗದು ॥ 1 ॥

ಜಗತ್ತಿನ ಎಲ್ಲ ದರ್ಶನ ಶಾಸ್ತ್ರಗಳೂ ಆತ್ಮನನ್ನು ಕುರಿತು ಮಾತನಾಡುತ್ತವೆ. ಇಂಥ ಆತ್ಮನ ಸ್ವರೂಪವನ್ನು ತಿಳಿದು, ಅದರ ನೆಲೆಯನ್ನು ಅರಿತು. ಮನಸ್ಸನ್ನು ಮತ್ತು ಉಸಿರಾಟವನ್ನು ಒಂದುಗೂಡಿಸಬೇಕು. ಅಂತರಂಗದಲ್ಲಿ ಉಲಿಯುವ ಓಂಕಾರ ನಾದವನ್ನು

ಕೇಳಬೇಕು; ತನುಗುಣಗಳಾದ ಹಸಿವು, ತೃಷೆ, ನಿದ್ರೆ, ವಿಷಯ, ಮೈಥುನ, ಬಯಕೆಗಳನ್ನು ತೊಲಗಿಸಬೇಕು. ತನುಗುಣಗಳನ್ನು ಗೆಲ್ಲದಿದ್ದರೆ ಲಿಂಗದೇವನ ಒಲುಮೆಯಾಗದು ॥ 2 ॥

ಈ ಜಗತ್ತು ರೂಪ ಚಕ್ರದೊಳಗೆ ಸುತ್ತುತ್ತಿದೆ. ಇದರಲ್ಲಿ ವಿಶ್ವ ರೂಪಿಯಾಗಿ ಲಿಂಗದೇವನಿದ್ದಾನೆ. ರೂಪದೊಳಗೆ ತೋರುವ ಸಗುಣ ಸಾಕ್ಷಾತ್ಕಾರವನ್ನು ಹೊಂದಿ ಅದನ್ನು ದಾಟಿ ನಿರೂಪನಾದ ದೇವನನ್ನು ತಿಳಿದುಕೊಂಡಲ್ಲದೆ ಲಿಂಗದೇವನ ಸ್ಥಾಪನೆಯು ಅಂಗದಲ್ಲಿ ಆಗದು. ॥ 3 ॥

406. ವಿರಕ್ತ ಲಕ್ಷಣ

ಅಯ್ಯಾ, ವಿರಕ್ತ ವಿರಕ್ತರೆಂದೇನೋ?
ವಿರಕ್ತಿಯ ಮಾತನಾಡುವರಲ್ಲದೆ ವಿರಕ್ತಿಕೆ ಎಲ್ಲರಿಗೆಲ್ಲಿಯದೋ?
ಕೈಯೊಳಗಣ ಓಲೆ, ಕಂಕುಳದೊಳಗಣ ಸಂಪುಟ,
ಬಾಯೊಳಗಣ ಮಾತು,
ಪುಣ್ಯವಿಲ್ಲ- ಪಾಪವಿಲ್ಲ, ಕರ್ಮವಿಲ್ಲ-ಧರ್ಮವಿಲ್ಲ,
ಸತ್ಯವಿಲ್ಲ-ಅಸತ್ಯವಿಲ್ಲವೆಂದು ಮಾತನಾಡುತ್ತಿಪ್ಪರು.
ಅದೆಂತೆಂದಡೆ:
ಕಂಗಳನೋಟ ಹಿಂಗದನ್ನಕ್ಕ, ಕೈಯೊಳಗಣ ಬೆರಟು ನಿಲ್ಲದನ್ನಕ್ಕ,
ಹೃದಯದ ಕಾಮ ಉಡುಗದನ್ನಕ್ಕ
ವಿರಕ್ತಿ ಎಲ್ಲರಿಗೆಲ್ಲಿಯದೋ?
ಬಲ್ಲ ವಿರಕ್ತನ ಹೃದಯುದಕದೊಳಗಣ ಗುಂಡಿನಲ್ಲಿ
ಮಾಣಿಕ್ಯದ ಪ್ರಭೆಯ ಕಂಡವರಾರೋ?
ಕಂಡಾತಂಗೆ ಕಣ್ಣಲ್ಲಿ ನೋಡಿದ ಸರ್ವವಸ್ತುಗಳು ಆ ಲಿಂಗಕ್ಕರ್ಪಿತ.
ಆ ಲಿಂಗವ ಕಂಡಾತಂಗೆ, ಕರ್ಣದಲ್ಲಿ ಕೇಳಿದ ಆಗಮ
ಪುರಾಣಂಗಳು ಆ ಲಿಂಗಕ್ಕರ್ಪಿತ.
ಆ ಲಿಂಗವ ಕಂಡಾತಂಗೆ ಜಿಹ್ವೆಯಲ್ಲಿ ರುಚಿಸಿದ
ಪದಾರ್ಥಂಗಳು ಆ ಲಿಂಗಕ್ಕರ್ಪಿತ.
ಅದೆಂತೆಂದಡೆ:
ಅಂಗವೂ ಲಿಂಗವು ಏಕಿಭವಿಸಿದಡೆ
ಅವಂಗೆ ಪುಣ್ಯವಿಲ್ಲ-ಪಾಪವಿಲ್ಲ,
ಕರ್ಮವಿಲ್ಲ-ಧರ್ಮವಿಲ್ಲ, ಸತ್ಯವಿಲ್ಲ-ಅಸತ್ಯವಿಲ್ಲ.
ಅದೆಂತೆಂದಡೆ:
ಬಂದುದ ಲಿಂಗಕ್ಕೆ ಕೊಟ್ಟನಾಗಿ ಬಾರದುದ ಬಯಸನಾಗಿ
ಅಂಗನೆಯರು ಬಂದು ಕಾಮಿತಾರ್ಥದಿಂದ ತನ್ನನಪ್ಪಿದಡೆ

ತಾ ಮಹಾಲಿಂಗವನಪ್ಪುವನಾಗಿ
ಆವಂಗೆ ಮುಖ ಬೇರಲ್ಲದೆ, ಆತ್ಮನೆಲ್ಲ ಒಂದೆ.
ಅದಕ್ಕೆ ಜಗವು ಪಾಪ-ಪುಣ್ಯವೆಂದು ಮಾತನಾಡುತ್ತಿಪ್ಪರು.
ಅದೆಂತೆಂದಡೆ: ಶಿವಂಗೆ ತಾಯಿಯಿಲ್ಲ, ಭುವನಕ್ಕೆ ಬೆಲೆಯಿಲ್ಲ.
ತರುಗಿರಿ ಗಹ್ವರಕ್ಕೆ ಮನೆಯಿಲ್ಲ.
ಲಿಂಗವನೊಡಗೂಡಿದ ವಿರಕ್ತಂಗೆ ಪುಣ್ಯಪಾಪವಿಲ್ಲ ಕಾಣಾ
ಚೆನ್ನಮಲ್ಲಿಕಾರ್ಜುನ ದೇವರ ದೇವಾ.

ವಿರಕ್ತಿಯ ಮಾತನಾಡುವರಲ್ಲದೆ ವಿರಕ್ತಿಕೆ ಎಲ್ಲರಿಗೆಲ್ಲಿಯದೋ? ಗುರು ಬಸವಣ್ಣನವರು ಬುದ್ಧನ ನಂತರ ಧರ್ಮಪ್ರಚಾರಕರ ವ್ಯವಸ್ಥೆಯನ್ನು ರೂಪಿಸಿದರು. ವೈರಾಗ್ಯ ಜೀವನವನ್ನು ಸ್ವೀಕರಿಸಿ ಅವರು ಧರ್ಮಪ್ರಚಾರ ಮಾಡುವಂತೆ ಪ್ರೇರಣೆ ಮತ್ತು ಆಶ್ರಯ ನೀಡಿದರು ಇವರುಗಳು ಕೈಯೊಳಗೆ ತಾಟ ಓಲೆ ಇಟ್ಟುಕೊಂಡು, ಕಂಕುಳಲ್ಲಿ ಒಂದು ಜೋಳಿಗೆ ಅದರಲ್ಲಿ ವಚನ ಸಂಪುಟ ಇಟ್ಟುಕೊಂಡು ಬೋಧೆ ಮಾಡುತ್ತಿದ್ದರು. ಎಲ್ಲರೂ ಒಂದೇ ಮಟ್ಟದವರು ಆಗಿರುತ್ತಿರಲಿಲ್ಲ. ಅವರು ವಿರಕ್ತರಿಗೆ ಪುಣ್ಯವಿಲ್ಲ ಪಾಪವಿಲ್ಲ, ಕರ್ಮವಿಲ್ಲ-ಧರ್ಮವಿಲ್ಲ, ಸತ್ಯವಿಲ್ಲ-ಅಸತ್ಯವಿಲ್ಲ ಎಂದು ಮಾತನಾಡುತ್ತಿದ್ದರು. ಎಲ್ಲರೂ ಉನ್ನತ ಮಟ್ಟದವರಾಗಿರಲಿಲ್ಲ. ನಿಜವಾದ ವಿರಕ್ತರು ಹೇಗೆ ಇರಬೇಕು ಎಂದರೆ ಕಣ್ಣಿನ ನೋಟದಲ್ಲಿ ನಿರ್ಲಿಪ್ತತೆ ಇರಬೇಕು; ಕೈಗಳು ಚಂಚಲತೆಯಿಂದ ಸರಿದಾಡಬಾರದು, ಹೃದಯದಲ್ಲಿ ಇರುವ ಕಾಮಭಾವನೆ ಅಡಗದಿದ್ದರೆ ಅದೆಂತಹ ವಿರಕ್ತಿ! ನಿಜವಾದ ವಿರಕ್ತನ ಹೃದಯ ಮಂದಿರದಲ್ಲಿ ಮಾಣಿಕ್ಯದ ಪ್ರಭೆ ಬೆಳಗುತ್ತಿರುವುದು. ಅವನ ದೈವೀಕರಣಗೊಂಡ ಕಣ್ಣಿನಲ್ಲಿ ನೋಡುವ ಎಲ್ಲವೂ ಲಿಂಗಕ್ಕೆ ಅರ್ಪಿತ. ಅವನು ಕೇಳಿದ ಶಾಸ್ತ್ರಗಳೆಲ್ಲವು ಲಿಂಗಕ್ಕರ್ಪಿತ. ಅವನ ನಾಲಿಗೆಯಲ್ಲಿ ರುಚಿಸಿದ ಎಲ್ಲ ಪದಾರ್ಥಗಳೂ ಎಲ್ಲವನ್ನು ಪಡೆದುಕೊಳ್ಳುವನು. ಅಂತಹ ವಿರಕ್ತನಿಗೆ ಪುಣ್ಯವಿಲ್ಲ ಪಾಪವಿಲ್ಲ, ಕರ್ಮವಿಲ್ಲ-ಧರ್ಮವಿಲ್ಲ, ಸತ್ಯವಿಲ್ಲ-ಅಸತ್ಯವಿಲ್ಲ, ಏಕೆಂದರೆ, ತನ್ನ ಬಳಿ ಬಂದುದನ್ನು ಲಿಂಗಕ್ಕೆ ಅರ್ಪಿಸುವನು, ಯಾವುದು ಲಭ್ಯವಿಲ್ಲವೋ ಅದಕ್ಕೆ ಆಸೆ ಮಾಡನು. ಲೌಕಿಕ ಆಕಾಂಕ್ಷೆಯ ಅಂಗನೆಯರು ಬಂದು (ಬಲವಂತವಾಗಿ) ಅಪ್ಪಿದರೆ ಅವನು ಅದನ್ನು ಆನಂದಿಸನು. ಅವನ ಮನಸ್ಸು ಮಹಾಲಿಂಗವನ್ನು ಅಪ್ಪಿರುತ್ತದೆ. ನಿಜ ವಿರಕ್ತನು ಸರ್ವಜೀವ ದಯಾಪಾರಿಯಾಗಿ ಎಲ್ಲರಲ್ಲಿರುವ ಆತ್ಮ ಒಂದೇ ಎಂದು ಭಾವಿಸುವನು.

ಜ್ಞಾನಿಯಾದ ವಿರಕ್ತನು ಪುಣ್ಯ-ಪಾಪಗಳಿಗೆ ಅತೀತನಾಗಿ ಇರುವನು. ಏಕೆಂದರೆ ದೇವರಿಗೆ ತಾಯಿ-ತಂದೆ ಇಲ್ಲ; ಭುವನಕ್ಕೆ ಬೆಲೆಯನ್ನು ಕಟ್ಟಲು ಸಾಧ್ಯವಿಲ್ಲ. ಗಿಡಮರ ಬೆಟ್ಟ ಗವಿಗಳಿಗೆ ಮನೆಯಿಲ್ಲ. ಅದೇ ರೀತಿ ಜ್ಞಾನಿಯು ಅಪೂರ್ವವಾಗಿ ಇರುವನು.

407. ಶಿವಾಚಾರದ ಮರ್ಮ.

ಭವಿಯಾಚಾರವ ಬಿಡದೆ ಭಯೋಗರವ ಹೋಗದೆ,
ಶಿವಾಚಾರದಲ್ಲಿ ನಡೆಯದ ನಾಯಿಗಳು ಬರಿದೆ ನಾವು ಶಿವಾಚಾರಿಗಳೆಂದರೆ

(ಪುಟ ೧೯ರಲ್ಲಿ ಮುಂದುವರೆದಿದೆ...)







ಶರಣೋತ್ಸವದ ಸಿಹಿ ಕ್ಷಣಗಳು









ಶರಣೋತ್ಸವದ ಸಿಹಿ ಕ್ಷಣಗಳು







ಸಾಸಲಹಟ್ಟಿಯಲ್ಲಿ ನಡೆದ ಮಾತ್ರೋತ್ಸವ









ಪೂನಾದಲ್ಲಿ ನಡೆದ ಬಸವ ಜಯಂತಿ ಕಾರ್ಯಕ್ರಮ

(೧೮ನೆಯ ಪುಟದಿಂದ ಮುಂದುವರಿದ ಭಾಗ)

ನಮ್ಮ ಶಿವಾಚಾರಿ ಸಂಗನ ಬಸವಣ್ಣ ಮೆಚ್ಚ ನೋಡಯ್ಯಾ.
ಶಿವಾಚಾರದ ಮಾರ್ಗವನು, ಶಿವಾಚಾರದ ಮರ್ಮವನು,
ಶಿವಾಚಾರದ ವಿಸ್ತಾರವನು ನಮ್ಮ ಶರಣ ಬಸವಣ್ಣ ಬಲ್ಲನಲ್ಲದೆ
ಉದರವ ಹೊರೆವ ವೇಷಧಾರಿಗಳೆತ್ತ ಬಲ್ಲರಯ್ಯಾ?
ಅಂತಪ್ಪ ಶಿವಾಚಾರದ ವಿಸ್ತಾರ ಸಕೀಲ ಹೇಳಿಹೆ ಕೇಳಿರಣ್ಣ.
ಅದೆಂತೆಂದೊಡೆ,
ಲಿಂಗಾಚಾರವೆಂದು, ಸದಾಚಾರವೆಂದು, ಶಿವಾಚಾರವೆಂದು,
ಭೃತ್ಯಾಚಾರವೆಂದು, ಗಣಾಚಾರವೆಂದು,
ಶಿವಾಚಾರವು ಐದುತೆರನಾಗಿಪ್ಪುದು ನೋಡಯ್ಯಾ.
ಶ್ರೀಗುರು ಕರುಣಿಸಿಕೊಟ್ಟ ಲಿಂಗವನಲ್ಲದೆ
ಅನ್ಯದೈವಂಗಳಿಗೆರಗದಿಹುದೇ ಲಿಂಗಾಚಾರ ನೋಡಯ್ಯಾ.
ತಾ ಮಾಡುವ ಸತ್ಯ ಕಾಯಕದಿಂದ ಬಂದ ಅರ್ಥಾದಿಗಳಿಂದ
ತನ್ನ ಕುಟುಂಬ ರಕ್ಷಣೆಗೊಂಬ ತೆರದಿ,
ಗುರುಲಿಂಗಜಂಗಮ ದಾಸೋಹಿಯಾಗಿಪ್ಪುದೇ
ಸದಾಚಾರ ನೋಡಯ್ಯಾ.
ಶಿವಭಕ್ತರಾದ ಲಿಂಗಾಂಗಿಗಳಲ್ಲಿ ಪೂರ್ವದ ಜಾತಿಸೂತಕಾದಿಗಳನ್ನು
ವಿಚಾರಿಸದೆ ಅವರ ಮನೆಯಲ್ಲಿ ತಾ ಹೊಕ್ಕು
ಒಕ್ಕು ಮಿಕ್ಕ ಪ್ರಸಾದವ ಕೊಂಬುದೇ ಶಿವಾಚಾರ ನೋಡಯ್ಯಾ.
ಲಿಂಗಾಂಗಿಗಳಾದ ಶಿವಭಕ್ತರೆ ಮರ್ತ್ಯದಲ್ಲಿ ಮಿಗಿಲಹರೆಂದು
ತಾನು ಅವರ ಭೃತ್ಯನೆಂದರಿದು
ಅಂತಪ್ಪ ನಿಜಲಿಂಗಾಂಗಿಗಳ ಚಮ್ಮಾವುಗೆಯ
ಕಾಯ್ದಿಪ್ಪುದೇ ಭೃತ್ಯಾಚಾರ ನೋಡಯ್ಯಾ.
ಗುರು ಲಿಂಗ ಜಂಗಮ ವಿಭೂತಿ ರುದ್ರಾಕ್ಷಿ ಮಂತ್ರ
ಪಾದೋಕ ಪ್ರಸಾದಗಳೆಂಬಷ್ಟಾವರಣಂಗಳು
ತನ್ನ ಪ್ರಾಣ ಸ್ವರೂಪವಾಗಿ, ಅವುಗಳ ನಿಂದೆಯನ್ನು ಕೇಳಿ ಸೈರಿಸದೆ
ಶಿಕ್ಷಿಸುವೆನೆಂಬ ನಿಷ್ಠೆಗೊಂಡುದೇ ಗಣಾಚಾರ ನೋಡಯ್ಯಾ.
ಇಂತಪ್ಪ ಶಿವಾಚಾರದ ಆಚಾರವನರಿಯದೆ
ನಾ ಶಿವಭಕ್ತ ನಾ ಶಿವಭಕ್ತೆ ನಾ ಶಿವಾಚಾರಿ
ಎಂದುಕೊಂಬ ಶೀಲವಂತರ ನೋಡಿ ಎನ್ನ ಮನ ನಾಚಿ
ನಿಮ್ಮಡಿ ಮುಖವಾಯಿತ್ತಯ್ಯ
ಶ್ರೀಗಿರಿ ಚೆನ್ನಮಲ್ಲಿಕಾರ್ಜುನದೇವರ ದೇವಯ್ಯಾ.

ಭವಿಯ ಆಚಾರ ಎಂದರೆ ಅನಾಚಾರ; ಸ್ನಾನ-ಪೂಜೆ ಇಲ್ಲದೆ ತಿನ್ನುವುದು-ಕುಡಿಯುವುದು; ಲಿಂಗಾಯತ ಧರ್ಮಕ್ಕೆ ವಿರುದ್ಧವಾಗಿ ಮಾಂಸಹಾರವನ್ನು

ಭುಂಜಿಸುವುದು. ಇವನ್ನೆಲ್ಲ ಮಾಡುವವರ ಜೊತೆ ಒಡನಾಡುವುದು ಶಿವಾಚಾರಿಗೆ ಸಲ್ಲದ ನಡೆ. ಭಯೋಗರ ಎಂದರೆ ಶರಣ (ವಿರಕ್ತ) ನು ತಿನ್ನಬಾರದ ಜಾಗದಲ್ಲಿ ಕದ್ದು ತಿನ್ನುವುದು. ಇಂಥ ನಡೆ ಅಳವಡಿಸಿಕೊಂಡು "ನಾವು ಶಿವಾಚಾರಿಗಳು" ಎಂದು ಹೇಳಿಕೊಂಡರೆ ಪ್ರಥಮಾಚಾರ್ಯ ಶಿವಾಚಾರಿ ಸಂಗನ ಬಸವಣ್ಣ ಮೆಚ್ಚನು. ಶಿವಾಚಾರದ ಮಾರ್ಗವನ್ನು ಮರ್ಮವನ್ನು ವಿಸ್ತಾರವನ್ನು ಸಂಗನ ಬಸವಣ್ಣನವರು ತಿಳಿದಿರುವರಲ್ಲದೆ ಹೊಟ್ಟೆ ಪಾಡಿಗಾಗಿ ಲಾಂಛನ ಧರಿಸಿದ ವೇಷಧಾರಿಗಳು ಎತ್ತ ಬಲ್ಲರು? ಶಿವಾಚಾರವು ಅತ್ಯಂತ ವಿಸ್ತಾರವಾದುದು ಎಂದು ಅಕ್ಕನವರು ಅದನ್ನು ಬಣ್ಣಿಸುತ್ತಾರೆ.

ಆಚಾರದಲ್ಲಿ 5 ಬಗ್ಗೆ–ಲಿಂಗಾಚಾರ, ಸದಾಚಾರ, ಶಿವಚಾರ, ಭೃತ್ಯಾಚಾರ, ಗಣಾಚಾರ ಎಂದು.

1.ಲಿಂಗಾಚಾರ : ಶ್ರೀಗುರುವು ಚಿತ್ಕಳೆ. ತುಂಬಿ, ಸೃಷ್ಟಿಕರ್ತ ಲಿಂಗದೇವನ ಕುರುಹಾಗಿ ಇಷ್ಟಲಿಂಗವನ್ನು ಕರುಣಿಸುವನು. ಲಿಂಗದೇವನೇ ಪತಿ ಶರಣನು ಸತಿ ಎಂಬ ಭಾವದಿಂದ ಪಾತಿವ್ರತ್ಯ ಭಾವದಿಂದ ಇಷ್ಟಲಿಂಗವನ್ನು ಸಾಧಕನು ಪೂಜಿಸಬೇಕು. ಅದನ್ನು ಬಿಟ್ಟು ಅನ್ಯ ದೈವಂಗಳಿಗೆ ಎರಗುವುದಿಲ್ಲ ಎಂಬ ನಿಷ್ಠೆಯೇ ಏಕದೇವೋಪಾಸನೆ; ಅದೇ ಲಿಂಗಾಚಾರ. (Consistent Monotheism)

2. ಸದಾಚಾರ : ಸತ್ಯ ಶುದ್ಧವಾಗಿ ಕಾಯಕವನ್ನು ಮಾಡುತ್ತ, ಅದರಿಂದ ಬಂದ ಅರ್ಥವನ್ನು ತನ್ನ ಕುಟುಂಬ ರಕ್ಷಣೆಗೆ ಬಳಸುತ್ತ ಜೊತೆಗೆ ಗುರು ಲಿಂಗ ಜಂಗಮಕ್ಕೆ ವಿನಿಯೋಗಿಸುವ ದಾಸೋಹ ಪ್ರಜ್ಞೆಯೇ ಸದಾಚಾರ. (Economic Equality)

3. ಶಿವಾಚಾರ : ಯಾವುದೇ ಜಾತಿಯವರು ಲಿಂಗದೀಕ್ಷೆ ಪಡೆದು ಲಿಂಗಾಂಗಿಗಳಾದ ಮೇಲೆ ದೀಕ್ಷಾಪೂರ್ವದ ಜಾತಿಯನ್ನು ಹುಡುಕದೆ ಅವರ ಮನೆಯಲ್ಲಿ ಹೋಗಿ ಅವರೊಡನೆ ಪ್ರಸಾದವ ಸೇವಿಸುವ ಸಾಮಾಜಿಕ ಸಮಾನತೆಯೇ ಶಿವಾಚಾರ.(Socio-religious Equality)

4. ಭೃತ್ಯಾಚಾರ : ಮರ್ತ್ಯಲೋಕದಲ್ಲಿ ಲಿಂಗಾಂಗಿಗಳೇ ಶ್ರೇಷ್ಠರೆಂದು ಪ್ರತಿಯೊಬ್ಬ ವ್ಯಕ್ತಿಯು ತಾನೇ ಸೇವಕ (ಭೃತ್ಯ)ನೆಂದು ಕಿಂಕರ ಭಾವದಿಂದ ಶರಣರ ಸೇವೆ ಮಾಡುವುದೇ ಭೃತ್ಯಚಾರ.(Social Service)

5. ಗಣಾಚಾರ : ಗುರು ಲಿಂಗ ಜಂಗಮ ವಿಭೂತಿ ರುದ್ರಾಕ್ಷಿ ಮಂತ್ರ ಪಾದೋದಕ, ಪ್ರಸಾದವೆಂಬ ಅಷ್ಟಾವರಣ ಕುರಿತು ಯಾರಾದರೂ ವಿಡಂಬನೆ, ನಿಂದೆ ಮಾಡಿದರೆ ಅದನ್ನು ಹೇಡಿತನದಿಂದ ಸಹಿಸಿಕೊಳ್ಳದೆ ಅಂಥ ನಿಂದಕರಿಗೆ ಶಿಕ್ಷೆ ನೀಡುವ ನಿಷ್ಠೆಯೇ ಗಣಾಚಾರ (Fighting against evil)

ಇಂಥ ಯಾವ ನಡೆಯೂ ಇಲ್ಲದೆ ನಾನು ಲಿಂಗಾಯತ, ಲಿಂಗಭಕ್ತ ಎಂದು ಹೇಳಿಕೊಳ್ಳುವ ಮಡಿವಂತರ ನೋಡಿ ಎನ್ನ ಮನ ನಾಚಿ ನಿಮ್ಮಡಿಗೆ ಅಭಿಮುಖವಾಯಿತ್ತು ಎಂದು ಅಕ್ಕನವರು ಹೇಳುತ್ತಾರೆ.

(ಮುಂದುವರಿಯುವುದು..)

ಬಸವಣ್ಣ ಮೆಚ್ಚುವ ಒಗತನ?!

–ಮಾತೆ ಕಸ್ತೂರಿದೇವಿ

ಹುಟ್ಟಿದೆ ಶ್ರೀಗುರುವಿನ ಹಸ್ತದಲ್ಲಿ,
ಬೆಳೆದೆನು ಅಸಂಖ್ಯಾತರ ಕರುಣದೊಳಗೆ.
ಭಾವವೆಂಬ ಹಾಲು, ಸುಜ್ಞಾನವೆಂಬ ತುಪ್ಪ,
ಪರಮಾರ್ಥವೆಂಬ ಸಕ್ಕರೆಯನಿಕ್ಕಿದರು ನೋಡಾ.
ಇಂತಪ್ಪ ತ್ರಿವಿಧಾಮೃತವನು ದಣಿಯಲೆರೆದು ಸಲಹಿದಿರೆನ್ನ.
ವಿವಾಹವ ಮಾಡಿದಿರಿ, ಸಯವಪ್ಪ ಗಂಡಂಗೆ ಕೊಟ್ಟಿರಿ,
ಕೊಟ್ಟ ಮನೆಗೆ ಕಳುಹಲೆಂದು
ಅಸಂಖ್ಯಾತರೆಲ್ಲರೂ ನೆರೆದು ಬಂದಿರಿ.
ಬಸವಣ್ಣ ಮೆಚ್ಚಲು ಒಗತನವ ಮಾಡುವೆ.
ಚೆನ್ನಮಲ್ಲಿಕಾರ್ಜುನದೇವ ದೇವನ ಕೈವಿಡಿದು
ನಿಮ್ಮ ತಲೆಗೆ ಹೂವ ತಹೆನಲ್ಲದೆ ಹುಲ್ಲ ತಾರೆನು.
ಅವಧರಿಸಿ, ನಿಮ್ಮಡಿಗಳೆಲ್ಲರೂ ಮರಳಿ ಬಿಜಯಂಗೈವುದು, ಶರಣಾರ್ಥಿ.

ಏನಿದು ಒಗತನ? ಅದರಲ್ಲೂ ಗುರು ಬಸವಣ್ಣನವರು ಮೆಚ್ಚುವಂಥ ಒಗತನ ಅಂದರೆ ಏನು ?! ವಚನಗಳಲ್ಲಿ ಒಗತನ ಎಂಬ ಪದ ಪ್ರಯೋಗವನ್ನು ಕೂಡಿ ಬಾಳುವೆ ಮಾಡುವುದು; ಅಚ್ಚುಕಟ್ಟಾಗಿ ಸಂಸಾರ ಮಾಡುವುದು; ದಾಂಪತ್ಯ ಅಥವ ಗೃಹಸ್ಥ ಜೀವನವನ್ನು ಇಹಪರದಲ್ಲಿ ಸಲ್ಲುವಂತೆ ನಡೆಸುವುದು ಎಂಬರ್ಥದಲ್ಲಿ ಬಳಕೆಯಾಗಿದೆ. ಇಲ್ಲಿ ಎರಡು ರೀತಿಯ ಒಗತನವನ್ನು ಕಾಣಬಹುದು. ಅವು ಆಧ್ಯಾತ್ಮಿಕ ಮತ್ತು ಲೌಕಿಕ ಒಗತನ. ಬಸವಾದಿ ಶರಣರು ಶರಣಸತಿ–ಲಿಂಗಪತಿಯೆಂಬ ಆಧ್ಯಾತ್ಮಿಕ ಭಾವಸಂಸಾರಕ್ಕೆ ಹೆಚ್ಚಿನ ಒತ್ತು ಕೊಟ್ಟಿದ್ದರೂ ಲೌಕಿಕವಾದ ಗೃಹಸ್ಥ ಜೀವನವನ್ನು ಎಲ್ಲೂ ಅಲ್ಲಗಳೆದಿಲ್ಲ ಎಂಬುದು ಗಮನಾರ್ಹ. ಅದರಲ್ಲೂ ದೇವ ಮತ್ತು ಭಕ್ತನ ನಡುವೆ ವ್ಯಕ್ತವಾಗುವ ಭಕ್ತಿಯ ಮಧುರ ಸಂಬಂಧವನ್ನು ಸಮರ್ಥಿಸಲು ಲೌಕಿಕ ದಂಪತಿಗಳ ನಡವಳಿಕೆಯನ್ನು ಉದಾಹರಣೆಯಾಗಿ ಕೊಡುತ್ತಾ ಜನಸಾಮಾನ್ಯರ ಹೃನ್ಮಂದಿರದಲ್ಲಿ ನಿಜ ಭಕ್ತಿಯ ಬೀಜವನ್ನು ಬಿತ್ತಿ ಬೆಳೆಯುವ ಪ್ರಯತ್ನ ಹಾಗೂ ಪರಿಶ್ರಮವನ್ನು ವಚನಗಳಲ್ಲಿ ಕಾಣುತ್ತೇವೆ.

ಆದರೆ, ಇತ್ತೀಚಿನ ವಿದ್ಯಮಾನಗಳಲ್ಲಿ ಆದರ್ಶ ದಾಂಪತ್ಯ ಜೀವನದ ಬಗ್ಗೆ ಊಹಿಸಲು ಕಷ್ಟವಾಗುತ್ತಿದೆ. ಏಕೆಂದರೆ ಪಾಶ್ಚಿಮಾತ್ಯ ಸಂಸ್ಕೃತಿಯ ಅನುಕರಣೆ, ಶೈಕ್ಷಣಿಕ ಗುಣಮಟ್ಟದಲ್ಲಿ ಯಾಂತ್ರಿಕತೆ ಮತ್ತು ದೂರದರ್ಶನದಲ್ಲಿ ಪ್ರಸಾರವಾಗುವ ಅಗ್ಗದ ಧಾರಾವಾಹಿಗಳ ಪ್ರಭಾವದಿಂದ ಆಧುನಿಕ ಯುವ ಜನಾಂಗದಲ್ಲಿ ಕೌಟುಂಬಿಕ ಸುಸ್ಥಿರ ಜೀವನ ಮೌಲ್ಯಗಳು ಕುಸಿಯುತ್ತಿವೆ. ಜತೆಗೆ ದುಡಿಮೆ–ದುಡ್ಡು–ಮೋಜುಗಳೆ ಮುಖ್ಯವಾಗಿ ಬದಲಾದ ಜೀವನ ಶೈಲಿಯಿಂದ ಮಾನವ ಸಂಬಂಧಗಳಲ್ಲಿ ಅಂತರ ಹೆಚ್ಚಾಗುತ್ತಿದೆ. ಇತ್ತೀಚೆಗೆ ಕಲ್ಯಾಣ ಮಂಟಪದಲ್ಲಿಯೇ ಕ್ಷುಲಕ ಕಾರಣಗಳಿಗಾಗಿ ಮದುವೆಗಳು ಮುರಿದು ಬೀಳುತ್ತಿರುವುದು ವಿಪರ್ಯಾಸವಾಗಿದೆ, ಪರಸ್ಪರ ಮೆಚ್ಚಿ ಪ್ರೇಮಿಸಿದ್ದಕ್ಕಾಗಿಯೋ, ಸಾಮಾಜಿಕ ವ್ಯವಸ್ಥೆಗಾಗಿಯೋ ಅಥವ ಹಿರಿಯರ ಒತ್ತಾಯಕ್ಕಾಗಿಯೋ ಮದುವೆ ಮಾಡಿಕೊಂಡರೂ ಪ್ರಾರಂಭದ ದಿನಗಳಲ್ಲಿ 'ಮದುವೆ ಆದ ಹೊಸದರಲ್ಲಿ ಹೆಂಡತಿಯನ್ನು ಹೊಸ್ತಿಲು ದಾಟಲು

ಬಿಟ್ಟಿಲ್ಲ' ಎಂಬ ಗಾದೆ ಮಾತಿನಂತೆ ಚನ್ನಾಗಿ ನೋಡಿಕೊಂಡರು ಕಾಲಾನಂತರ ದಂಪತಿಗಳಲ್ಲಿ ಪರಸ್ಪರ ಅಪನಂಬಿಕೆ, ವೈಮನಸ್ಯ, ದುರಾಸೆ, ಅಗೌರವಗಳು ಹೆಚ್ಚುತ್ತಿರುವ ಸಂಸಾರಗಳಲ್ಲಿ ಬಿರುಕು(ಕಂದಕ) ಜಾಸ್ತಿಯಾಗುತ್ತಿವೆ. ಇನ್ನು ಎಷ್ಟೋ ಜನರಿಗೆ ರೂಪ, ವಿದ್ಯೆ, ಹಣ, ಒಳ್ಳೆ ನೌಕರಿ ಎಲ್ಲಾ ಇದ್ದರೂ ಸರಿಯಾಗಿ ಸಂಸಾರ ಮಾಡಲು ಬರುವುದಿಲ್ಲ. ಕಾರಣ ಮನೆಗಳಲ್ಲಿ ತಾಯಿತಂದೆಯರು ಮಕ್ಕಳಿಗೆ ಈ ಬಗ್ಗೆ ಯಾವುದೇ ತಿಳುವಳಿಕೆಯಾಗಲಿ, ಸಂಸ್ಕಾರವಾಗಲಿ ಕೊಡದೆ ಅತಿ ಮುದ್ದಾಗಿ ಬೆಳೆಸಿರುವುದು. ಇದರಿಂದ ಕುಟುಂಬದಲ್ಲಿ ಹೊಂದಾಣಿಕೆಯ ಸಮಸ್ಯೆಗಳು ಹೆಚ್ಚಾಗುತ್ತಿವೆ.

ನಾವು ಬಾಲ್ಯದಲ್ಲಿ ಚಂದಮಾಮ ಕಥೆಗಳನ್ನು ಓದುತ್ತಿದ್ದೆವು, ಅದರಲ್ಲಿ ಒಂದು ಕಥೆ ಹೀಗಿತ್ತು. ಅಪ್ಪನಾದವನು ತನ್ನ ಇಬ್ಬರು ಹೆಣ್ಣು ಮಕ್ಕಳಿಗೆ ಅನುರೂಪರಾದ ವರರನ್ನು ಹುಡುಕಿ ಮದುವೆ ಮಾಡಿಕೊಟ್ಟಿರುತ್ತಾನೆ. ಗಂಡನ ಮನೆಗೆ ಹೋದ ಹೆಣ್ಣು ಮಕ್ಕಳು ಬಹು ಬೇಗ ತವರಿಗೆ ಮರಳುತ್ತಾರೆ. ಏಕೆಂದು ವಿಚಾರಿಸಿದಾಗ ಅವರು ಕೊಟ್ಟ ಕಾರಣ ಅಪ್ಪನನ್ನು ದಂಗಾಗಿಸುತ್ತದೆ. ಮೊದಲ ಮಗಳು ಹೇಳುತ್ತಾಳೆ

'ಅಪ್ಪ...ನನ್ನ ಗಂಡ ನನ್ನನ್ನು ಸಂಜೆ ಹೊತ್ತು ವಾಯು ವಿಹಾರಕ್ಕೆ ಕರೆದುಕೊಂಡು ಹೋದ. ನಾನು ಅವನ ಜತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದರೂ ಅವನು ನನ್ನನ್ನು 'ಕಾಲು ನೋಯುತ್ತಿದೆಯೇ' ಎಂದು ವಿಚಾರಿಸಿಕೊಳ್ಳಲಿಲ್ಲ. ಆದ್ದರಿಂದ ಅವನೊಡನೆ ಬಾಳುವೆ ಮಾಡುವುದು ನನಗೆ ಕಷ್ಟವಾಗುತ್ತಿದೆ. ಅದಕ್ಕೆ ನಾನು ವಾಪಸ್ಸು ಬಂದು ಬಿಟ್ಟೆ' ಎಂದಳು.

ಇನ್ನು ಎರಡನೆಯ ಮಗಳು ಹೇಳಿದ್ದನ್ನು ಕೇಳೋಣ 'ಅಪ್ಪ...ನನ್ನ ಗಂಡ ನನ್ನನ್ನು ಸುತ್ತಾಡಿ ಬರಲೆಂದು ಒಂದು ಸುಂದರವಾದ ಉದ್ಯಾನವನಕ್ಕೆ ಕರೆದೊಯ್ದ. ಅಲ್ಲಿ ವಿಶ್ರಾಂತಿಗೆಂದು ಒಂದು ಮರದ ಕೆಳಗೆ ಕುಳಿತೆವು. ಅಷ್ಟರಲ್ಲಿ ನನ್ನ ಭುಜದ ಮೇಲೆ ಮರದಿಂದ ಒಂದು ಹೂವು ಬಿತ್ತು. ಅದನ್ನು ನೋಡಿದ ನನ್ನ ಗಂಡ 'ನೋವಾಯಿತೆ ಚಿನ್ನ' ಎಂದು ಕೇಳಲಿಲ್ಲ, ಅದಕ್ಕೆ ಬೇಜಾರಾಗಿ ನಾನು ಬಂದುಬಿಟ್ಟೆ' ಎಂದು ವರದಿ ಒಪ್ಪಿಸಿದಳು. ಇಂಥ ಹೆಣಗೇಡಿಗಳಿಂದ ಸಂಸಾರ ರಥವನ್ನು ಯಶಸ್ವಿಯಾಗಿ ಎಳೆಯಲು ಸಾಧ್ಯವೆ?. ಅಲ್ಲದೆ ಇಂಥ ಕ್ಷುಲ್ಲಕ ಕಾರಣಗಳಿಂದ ಕೊಟ್ಟ ಮತ್ತು ಹೋದ ಮನೆಗೆ ಕೀರ್ತಿ ಬರುವುದೆ? ಕೌಟುಂಬಿಕ ಭದ್ರತೆ, ಸಾಮಾಜಿಕ ಸ್ಥಾನಮಾನ, ಜೀವನ ಮೌಲ್ಯಗಳಲ್ಲಿ ನಂಬಿಕೆ ಉಳ್ಳವರು ಖಂಡಿತ ಇಂಥ ಧೋರಣೆಯನ್ನು ಒಪ್ಪುವುದಿಲ್ಲ. ಇಂದು ಸಮಾಜದಲ್ಲಿ ನಾನಾ ಕಾರಣಗಳಿಗಾಗಿ ಮುರಿದು ಹೋಗಿರುವ ಸಾಕಷ್ಟು ಸಂಸಾರಗಳನ್ನು ಕಾಣಬಹುದು. ಈ ಕಾರಣಕ್ಕಾಗಿಯೇ ಪೂಜ್ಯ ಮಾತಾಜಿಯವರು ಹೇಳುತ್ತಾರೆ 'ವೈವಾಹಿಕ ಜೀವನ ಯಶಸ್ವಿಯಾಗಿ ಗುರಿ ಮುಟ್ಟುವುದೆಂದರೆ ಲಾಟರಿ ಹೊಡೆದಂತೆ' ಎಂದು. ಅಲ್ಲದೆ ಮದುವೆ ಆದ ನಂತರ ನಿಮ್ಮ ಸಂಸಾರ ಹೇಗಿದೆ; ಸುಖವಾಗಿದ್ದೀರಾ? ಎಂದು ಪ್ರಶ್ನಿಸಿದರೆ ನೂರಕ್ಕೆ ತೊಂಬತ್ತರಷ್ಟು ಜನ 'ಅಯ್ಯೋ ಬೇಡಪ್ಪ ಅನ್ನಿಸುತ್ತದೆ. ಈ ಮದುವೆ ಸಂಸಾರ ಯಾರು ನಿಡಿದರೊ?! ಕಷ್ಟ ಎಂದು ಮೊದಲೆ ಗೊತ್ತಿದ್ದರೆ ಮದುವೆನೇ ಆಗುತ್ತಿರಲಿಲ್ಲ' ಎಂದು ನಿಟ್ಟುಸಿರು ಬಿಡುತ್ತಾರೆ. ನಮ್ಮ ಸಂಸಾರ ಚನ್ನಾಗಿದೆ ಎಂದು ಹೇಳುವವರು ಅಪರೂಪ. ಮದುವೆ ಎನ್ನುವುದು ಎರಡು ಹೃದಯ, ಮನಸ್ಸು, ಕುಟುಂಬಗಳನ್ನು, ಬೆಸೆಯುವ ಸಾಧನ ಎಂಬುದನ್ನು ಇಂದಿನವರು ಮರೆಯುತ್ತಿದ್ದಾರೆ. ಇರಲಿ, ಇದೆಲ್ಲ ಲೌಕಿಕರ ಮಾತಾಯಿತು. ಇನ್ನು ಅಕ್ಕ ಮಹಾದೇವಿ ಪ್ರತಿಪಾದಿಸಿದಂತೆ ಆಧ್ಯಾತ್ಮಿಕ ಅಥವ ಪಾರಮಾರ್ಥಿಕ ಸಂಸಾರಕ್ಕೆ ಬರೋಣ.

ವಿವಾಹ ಪೂರ್ವ(ಬಾಲ್ಯಾವಸ್ಥೆ)ದಲ್ಲಿ ಮಕ್ಕಳಿಗೆ ಗುರುಹಿರಿಯರು ತಾಯಿತಂದೆಯರಿಂದ ಬಳುವಳಿಯಾಗಿ ಬರುವ ಸಂಸ್ಕಾರದ ಚಿತ್ರಣವನ್ನು ಅಕ್ಕ ತಮ್ಮ ವಚನದಲ್ಲಿ ಬಣ್ಣಿಸಿದ್ದಾರೆ. ಹುಟ್ಟಿದೆ ಶ್ರೀ ಗುರುವಿನ ಹಸ್ತದಲ್ಲಿ- ಇಲ್ಲಿ ಎರಡು ರೀತಿಯ ಹುಟ್ಟ(ಜನ್ಮ)ನ್ನು ಕಾಣಬಹುದು. ಒಂದು ತಾಯಿ ಗರ್ಭದಿಂದ ಭೂಮಿಗೆ ಬರುವುದು. ಇನ್ನೊಂದು ಗುರುವಿನಿಂದ ಹಸ್ತಮಸ್ತಕ ಸಂಯೋಗದ ಮೂಲಕ ದೀಕ್ಷೆ ಪಡೆದು ಕರಕಮಲ ಸಂಜಾತನಾಗಿ ಮರುಹುಟ್ಟು ಪಡೆಯುವುದು. ದೀಕ್ಷೆಯಿಂದ ಭವಿಜನ್ಮ ಕಳೆದು ಭಕ್ತನಾಗಿ ಗುರುವಿನ ಮಾರ್ಗದರ್ಶನದಲ್ಲಿ ಸಾಧನಾಪಥದಲ್ಲಿ ಸಾಗುವುದು. ಮುಂದೆ ಹೇಳುತ್ತಾರೆ- ಬೆಳೆದೆನು ಅಸಂಖ್ಯಾತರ ಕರುಣದೊಳಗೆ ಎಂದು. ಹುಟ್ಟಿದ ನಂತರ ಶಾರೀರಿಕ, ಮಾನಸಿಕ ಬೆಳವಣಿಗೆ ಸಹಜವಷ್ಟೆ. ಲೌಕಿಕವಾದ ಜನ್ಮದಲ್ಲಿ ಅಪ್ಪ, ಅಮ್ಮ, ಅಜ್ಜಿ,ಅಜ್ಜ, ಮುಂತಾದ ರಕ್ತಸಂಬಂಧಿಕರ ನಡುವೆ ಬೆಳವಣಿಗೆ ಸಾಧ್ಯವಾದರೆ, ಆಧ್ಯಾತ್ಮಿಕ ಹುಟ್ಟಿನಲ್ಲಿ ಶರಣರು, ಅನುಭಾವಿಗಳು, ಸಾಧಕರು, ಜ್ಞಾನಿಗಳು, ಮುಮುಕ್ಷುಗಳು ಮುಂತಾದ ಜಂಗಮ ಪುಂಗವರ ನಡುವೆ ಅಪಾರವಾದ ಕರುಣೆ, ಮಮತೆ, ವಾತ್ಸಲ್ಯದ ಮಡುವಿನಲ್ಲಿ ಮಿಂದು ಪಾವನರಾಗಿ ಬೆಳೆಯುವ ಸುಯೋಗ ಪ್ರಾಪ್ತಿಯಾಗುತ್ತದೆ. ದಷ್ಟಪುಷ್ಟವಾಗಿ ಆರೋಗ್ಯವಾಗಿ ಬೆಳೆಯಲಿ ಎಂದು ತಾಯಿ ಮಗುವಿಗೆ ಹಾಲು, ತುಪ್ಪ, ಸಕ್ಕರೆಯನ್ನು ಬೆರೆಸಿ, ರಮಿಸಿ, ಕುಡಿಸಿ ಬೆಳೆಸುತ್ತಾಳೆ. ಅಕ್ಕ ವಚನವೊಂದರಲ್ಲಿ ಪ್ರಸ್ತಾಪಿಸುವಂತೆ 'ಭಾವನೆಯೆ ಜೀವನವು ಕೇಳಾ ಲಿಂಗ ತಂದೆ' ಎಂದಂತೆ ಆಧ್ಯಾತ್ಮಿಕ ಜೀವನದಲ್ಲಿ ಸಹ ಗುರುಬಂಧುಗಳು ಪರಮಾತ್ಮನ ವಾಸಸ್ಥಾನವಾದ ಹೃದಯ ಕಮಲವು ಚನ್ನಾಗಿ ಪಕ್ವಗೊಂಡು ಅರಳಲಿ ಎಂಬ ಸದುದ್ಧೇಶದಿಂದ ಪೌಷ್ಟಿಕವಾದ ಸದ್ಭಾವದ ದಿವ್ಯಾಮೃತವನ್ನು ನೀಡುತ್ತಾರೆ.

ನಮ್ಮ ಸುತ್ತಲಿರುವ ಜಗತ್ತನ್ನು ಮತ್ತು ಜೀವಸಂಕುಲವನ್ನು ಸೃಷ್ಟಿಸಿ ಕಾರಣೀಭೂತನಾದ ಜಗತ್ಕರ್ತ ಪರಮಾತ್ಮನೊಬ್ಬನಿದ್ದಾನೆ. ಅವನು ಹೃದ್ಗೋಚರನಾಗಿ ಅನುಭವಕ್ಕೆ ಮಾತ್ರ ಸಿಲುಕುತ್ತಾನೆ ಎಂಬ ಸುಜ್ಞಾನದ ಪರಿಮಳಯುಕ್ತ, ಶುದ್ಧ ತುಪ್ಪವನ್ನು ಮತಿಮನಗಳಿಗೆ ಉಣ್ಣಿಸಿ ನನ್ನ ವ್ಯಕ್ತಿತ್ವವು ದೈವೀಮಯವಾಗಿ ಶೋಭಿಸಲು ಕಾರಣರಾದಿರಿ. ಅಷ್ಟೇ ಅಲ್ಲ ಸದ್ಭಾವನೆಯ ಹಾಲು, ಸುಜ್ಞಾನದ ತುಪ್ಪವು ಮತ್ತಷ್ಟು ರುಚಿಯಾಗಲಿ ಎಂಬ ದೃಷ್ಟಿಯಿಂದ ಪರಮಾರ್ಥ(ಆಧ್ಯಾತ್ಮ) ಎಂಬ ಸಕ್ಕರೆ ಬೆರೆಸಿ ಜೀವನವೆಲ್ಲ ಲಿಂಗಮಯವಾಗಲೆಂದು ಹರಸಿದಿರಿ. ಹೀಗೆ ನನ್ನನ್ನು ಪರಮಾತ್ಮನಿಗೆ ಸಲ್ಲುವ ಆಭರಣವಾಗಿ ಮಾಡಿ ಸರ್ವಾಂಗ ಪರಿಪೂರ್ಣನಾದ ವರನಿಗೆ ಕೊಟ್ಟು ಮದುವೆ ಮಾಡಿದಿರಿ. ಕೊಟ್ಟ ಮನೆಗೆ ಕಳುಹಿಸಬೇಕೆಂದು ತಾವುಗಳೆಲ್ಲ ತುಂಬು ಹೃದಯದಿಂದ ಸೇರಿ ಬೀಳ್ಕೊಡಲು ಬಂದಿರುವಿರಿ. ಅಪ್ಪ ಗುರು ಬಸವಣ್ಣನವರು ಮೆಚ್ಚುವಂತೆ ದೇವನೊಡನೆ ಸಂಸಾರ ಮಾಡುವೆ ಎಂದು ತಮ್ಮೆಲ್ಲರ ಕರುಣೆಯ ಕಂದನಾಗಿ ಪ್ರತಿಜ್ಞೆ ಮಾಡುವೆ. ನಿಮ್ಮ ಮುಡಿಗೆ ಸತ್ಕೀರ್ತಿಯ ಹೂವನ್ನು ತರುವೆ; ಅಪಕೀರ್ತಿಯ ಹುಲ್ಲಿನ ಹೊರೆಯನ್ನು ಖಂಡಿತ ಹೊರಿಸುವುದಿಲ್ಲ. ಕೃಪೆ ಮಾಡಿ ಮನ್ನಿಸಿರಿ. ಹಿಂಬಾಲಿಸುತ್ತಿರುವ ತಮ್ಮ ಪಾದಗಳನ್ನು ದಣಿಯುವ ಮೊದಲೆ ಹಿಂದಕ್ಕೆ ತಿರುಗಿಸಿರಿ ಎಂದು ಅಕ್ಕನವರು ಶರಣಸಂಗಮದಿಂದ ಬಿಡುಗಡೆ ಹೊಂದಿ ದೇವನೊಡನೆ ಲಿಂಗಾಂಗಸಾಮರಸ್ಯದಿಂದ ಒಂದಾಗುವ ಗುರಿಯೆಡೆಗೆ ಸಾಗುತ್ತಿದ್ದಾರೆ. ಅಂದು ಅಕ್ಕ ನಡೆದು ತೋರಿದ ದಾರಿ ಮತ್ತು ಆದರ್ಶ ನಡೆನುಡಿಗಳು ಇಂದಿಗೂ

ಪ್ರತಿಯೊಬ್ಬ ಹೆಣ್ಣು ಮಗಳಿಗೂ ಅನುಕರಣೀಯ ಮತ್ತು ಆದರ್ಶಪ್ರಾಯ ಎಂಬುದರಲ್ಲಿ ಸಂದೇಹವಿಲ್ಲ.

ವಿಶ್ವಗುರು ಬಸವಣ್ಣನವರು ದೇವರು ಮೆಚ್ಚುವಂತೆ ತಮ್ಮ ಬಾಳನ್ನು ರೂಪಿಸಿಕೊಳ್ಳಲು ಸಂಕಲ್ಪಿಸಿದರೆ ಅವರ ಸಮಕಾಲೀನ ಶರಣರು ಮಾತ್ರ ದೇವರಿಗಿಂತಲೂ ಗುರು ಬಸವತಂದೆಯವರನ್ನು ಮೆಚ್ಚಿಸಲು ಹಂಬಲಿಸಿ ತಮ್ಮ ಬದುಕು, ಆಶಯಗಳನ್ನು ಸಜ್ಜುಗೊಳಿಸಲು ಶ್ರಮಿಸಿರುವುದು ಕಂಡುಬರುತ್ತದೆ. ಏಕೆಂದರೆ ಗುರು ಬಸವತಂದೆಯವರ ಮೆಚ್ಚುಗೆಯ ಹಿಂದೆ ದೇವರ ಮೆಚ್ಚುಗೆ ಅಡಗಿದೆ ಎಂಬ ಧೈರ್ಯ ಮತ್ತು ನಂಬಿಕೆ ಅವರಿಗಿತ್ತು. ಈ ಮಾತಿಗೆ ಪುಷ್ಟಿ ಕೊಡಲು 'ಬಸವಾ ಬಸವಾ ಎಂದು ಭಸಿತಮಂ ಧರಿಸಿದರೆ ಬಸವಾದಿ ಪ್ರಮಥರಿಗೆ ಪ್ರೀತಿಯಯ್ಯಾ' ಎಂಬ ಮುಳಗುಂದ ಶ್ರೀ ಮಹಾಂತ ಶಿವಯೋಗಿಗಳ ಜಪವಾಣಿಯನ್ನು ಸ್ಮರಿಸಬಹುದು. ಅಂದರೆ ಇಲ್ಲಿ ಅಪ್ಪ ಬಸವಣ್ಣನವರು ಸದಾಚಾರ, ಸದ್ಭಕ್ತಿ, ಸತ್ಕ್ರಿಯೆ, ಸುಜ್ಞಾನ, ಸದ್ಭಾವ, ಸಚ್ಚಾರಿತ್ರ್ಯ, ಗುಣಗ್ರಾಹಕತ್ವ ಮುಂತಾದ ಸದ್ಗುಣ ಸಂಪನ್ನರಾಗಿ ಉಳಿದವರಿಗೆ ಮಾದರಿಯಾಗಿದ್ದರು. ಹೀಗಾಗಿ ಅಪ್ಪ ಬಸವಣ್ಣನವರನ್ನು ಮೆಚ್ಚಿಸಲು, ಅನುಕರಿಸಲು ಎಲ್ಲರೂ ಹಾತೊರೆಯುತ್ತಿದ್ದರು ;ಪ್ರಯತ್ನಿಸುತ್ತಿದ್ದರು. ಅಲ್ಲದೆ ಇಲ್ಲಿ ಗುರು ಬಸವತಂದೆಯವರನ್ನು ಅನುಕರಿಸುವುದರಲ್ಲೂ ಒಂದು ಆಧ್ಯಾತ್ಮಿಕ, ಧಾರ್ಮಿಕ, ಸಾಮಾಜಿಕ, ನೈತಿಕ, ಆರೋಗ್ಯಕರ ಶಿಸ್ತು ಇರುತ್ತಿತ್ತು. ಅಲ್ಲಿ ಅಷ್ಟಾವರಣ, ಪಂಚಾಚಾರ, ಷಟಸ್ಥಲ ಮುಂತಾದ ಕ್ರಮಬದ್ಧವಾದ ಸಾಧನಾ ಕ್ರಮವಿತ್ತು, ಆದ್ದರಿಂದ ಇಂಥ ಅನುಕರಣೆ ಸರ್ವಯೋಗ್ಯವಾಗಿತ್ತು.

ಇದರ ಬೆಂಬಳಿ ಹಿಡಿದು ಪೂಜ್ಯ ಮಾತಾಜಿಯವರು ತಮ್ಮ ಪ್ರವಚನಗಳಲ್ಲಿ ವಿದ್ಯಾರ್ಥಿಗಳಿಗೆ ಹೀಗೆ ಕರೆ ಕೊಡುತ್ತಿದ್ದರು 'ನೀವು ಸಂಕೋಚ, ನಾಚಿಕೆ ಪಡದೆ ಧೈರ್ಯವಾಗಿ ವಿಭೂತಿ ಧರಿಸಿಕೊಂಡು ಶಾಲಾ ಕಾಲೇಜುಗಳಿಗೆ ಹೋಗಿರಿ. ಇದರಿಂದ ನಿಮ್ಮನ್ನು ಯಾರಿಗೂ ಸಿನಿಮಾನಟ ನಟಿಯರಿಗೆ ಹೋಲಿಸಿ ಕೀಳಾಗಿ ಚುಡಾಯಿಸಲು ಧೈರ್ಯ ಮಾಡುವುದಿಲ್ಲ. ಬದಲಿಗೆ ಕಿತ್ತೂರು ಚನ್ನಮ್ಮ, ಅಕ್ಕಮಹಾದೇವಿ ಎಂದಾರು. ಅದನ್ನು ಹೆಮ್ಮೆಯಿಂದ ಸ್ವೀಕರಿಸಿರಿ' ಎಂದು. ಗುರು ಬಸವಣ್ಣನವರು ಹೇಳುವಂತೆ ಪರಮಾತ್ಮನನ್ನು ಮೆಚ್ಚಿಸುವುದು ಅಷ್ಟೇನು ಸುಲಭವಲ್ಲ. ಏಕೆಂದರೆ ಈ ವಚನವನ್ನು ಓದಿರಿ

ಮನೆಯ ಗಂಡನ ಮನೆವಾರ್ತೆಯನೇನ ಹೇಳುವೆನವ್ವಾ!
ಅಂಗವಿದ್ಯೆಯನೊಲ್ಲ, ಕಂಗಳೊಳಗಣ ಕಸವ ಕಳೆದಲ್ಲದೆ ನೋಡಲೀಯ,
ಕೈಯ ತೊಳೆದಲ್ಲದೆ ಮುಟ್ಟಲೀಯ, ಕಾಲ ತೊಳೆದಲ್ಲದೆ ಹೊಂದಲೀಯ ॥

ಇಂತೀ ಸರ್ವಾಂಗ ತಲೆದೊಳೆದ ಕಾರಣ,ಲಿಂಗದೇವನೆನ್ನ ಕೂಡಿಕೊಂಡ ನವ್ವಾ ಲಿಂಗದೇವನ ವಾರ್ತೆ ಅಂದರೆ ವಿಷಯವನ್ನು ಏನೆಂದು ಹೇಳುವುದು. ಅಂಗವಿದ್ಯೆ-ಮಾನವನ ಹುಟ್ಟುಗುಣಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಅರಿಷಡ್ವರ್ಗಗಳನ್ನು ಪರಮಾತ್ಮನು ಒಲ್ಲ. ಕಣ್ಣಿನಲ್ಲಿರುವ ಕಸವನ್ನು ಅಂದರೆ ಕೆಟ್ಟನೋಟ, ಸಂಕುಚಿತ ಮನೋಭಾವ ಮುಂತಾದುವನ್ನು ಕಳೆದು ಶುಚಿಯಾದರೆ ಮಾತ್ರ ನೋಡುತ್ತಾನೆ. ಇಲ್ಲದಿದ್ದರೆ ಅವನು ಕಣ್ಣೆತ್ತಿಯೂ ದೃಷ್ಟಿ ಹಾಯಿಸುವುದಿಲ್ಲ. ಇನ್ನು ಕೈಗಳನ್ನು ದುರಾಚಾರ, ದುಷ್ಕರ್ಮಗಳಿಂದ ತೊಳೆದರೆ ಮಾತ್ರ ಮುಟ್ಟಲು ಅವಕಾಶ ಕೊಡುತ್ತಾನೆ. ಕೆಟ್ಟ

ನಡವಳಿಕೆಯನ್ನು ತೊರೆದಲ್ಲದೆ ಹತ್ತಿರಕ್ಕೆ ಬಿಟ್ಟುಕೊಳ್ಳನು. ಲಿಂಗದೇವನನ್ನು ಶರಣಸತಿಯಾಗಿ ಕೂಡುವ ಹಂಬಲದಿಂದ ಪರಿಶುದ್ಧವಾದ ಕಾರಣ ನನ್ನನು ಇಂಬಿಟ್ಟುಕೊಂಡಿದ್ದಾನೆ ಎಂದು ಗುರು ಬಸವಣ್ಣನವರು ದೇವನನ್ನು ಮೆಚ್ಚಿಸುವ, ಕೂಡುವ ಮಾರ್ಗೋಪಾಯವನ್ನು ಇಲ್ಲಿ ಅರುಹಿದ್ದಾರೆ. ಪ್ರವಚನ ಪಿತಾಮಹ ಪೂಜ್ಯ ಲಿಂಗಾನಂದ ಅಪ್ಪಾಜಿಯವರು ತಮ್ಮ ಪ್ರವಚನದಲ್ಲಿ ಗುರು ಮತ್ತು ದೇವರ ಕರುಣೆಯ ವ್ಯತ್ಯಾಸವನ್ನು ಬಣ್ಣಿಸುವ ಕಥೆಯನ್ನು ಸ್ವಾರಸ್ಯವಾಗಿ ಹೇಳುತ್ತಿದ್ದುದ್ದನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದು. ಅಪ್ಪ ಅಮ್ಮ ಇರುತ್ತಾರೆ. ಅವರಿಗೆ ಒಬ್ಬ ಮುದ್ದಾದ ಪುಟ್ಟ ಮಗನಿರುತ್ತಾನೆ. ಅವನು ಹೊರಗೆ ಗೆಳೆಯರೊಂದಿಗೆ ಮಣ್ಣಿನಲ್ಲಿ ಮನದಣಿಯೆ ಆಟವಾಡಿ ಖುಷಿಯಿಂದ ಮನೆಗೆ ಓಡೋಡಿ ಬರುತ್ತಾನೆ. ಗರಿಗರಿಯಾಗಿ ಇಸ್ತ್ರಿ ಮಾಡಿದ ಬಟ್ಟೆ ಹಾಕಿಕೊಂಡು ಕಛೇರಿಗೆ ಹೊರಡಲು ಸಿದ್ದನಾಗಿದ್ದ ಅಪ್ಪನನ್ನು ಪ್ರೀತಿಯಿಂದ ತಬ್ಬಿಕೊಳ್ಳಲು ಸಮೀಪ ಹೋಗುತ್ತಲೆ ಅಪ್ಪ ಗದರುತ್ತಾನೆ 'ಹೇ ನನ್ನ ಬಟ್ಟೆ ಮೈಯೆಲ್ಲ ಕೊಳೆಯಾಗಿದೆ. ನನ್ನ ಹತ್ತಿರ ಬರಬೇಡ ದೂರ ಹೋಗು.' ಎಂದು. ಇದರಿಂದ ನಿರಾಶನಾದ ಮಗನ ಅಳುಮುಖವನ್ನು ನೋಡಿದ ತಾಯಿ ಮರುಗಿ ಹತ್ತಿರ ಕರೆದು ಅತ್ಯಂತ ಪ್ರೀತಿ, ಮಮತೆ, ವಾತ್ಸಲ್ಯಗಳಿಂದ ಮೈದಡವಿ ಜನಪದ ವಾಣಿಯಂತೆ ॥ ಆಡಿ ಬಾ ನನ ಕಂದ । ಅಂಗಾಲ ತೊಳದೇನುತೆಂಗಿನ ಕಾಯಂಥ ತಿಳಿನೀರ । ತಕ್ಕೊಂಡುಬಂಗಾರ ಪಾದ ತೊಳೆದೇನಾ॥ ಎನ್ನುತ್ತಾ ತನ್ನ ಕಂದಮ್ಮನಿಗೆ ಶುಚಿಯಾದ ತಿಳಿನೀರಿನಿಂದ ಸ್ನಾನ ಮಾಡಿಸಿ, ಮಡಿಯಾದ ಬಟ್ಟೆ ತೊಡಿಸಿ, ಗಮಗಮಿಸುವ ಸ್ನೋಪೌಡರ್ ಹಚ್ಚಿ ದೃಷ್ಟಿ ಬೊಟ್ಟಿಟ್ಟು ಆಡಲು ಬಿಡುತ್ತಾಳೆ. ಆಗ ಶುಚಿರ್ಭೂತನಾಗಿ, ಅಲಂಕೃತಗೊಂಡ ಮಗನನ್ನು ನೋಡಿದ ಅಪ್ಪ ಬಾಚಿ ತಬ್ಬಿಕೊಂಡು ಮುದ್ದಾಡುತ್ತಾನೆ. ಇದೇ ರೀತಿ ಗುರುವು ತಾಯಿಯಂತೆ ಭಕ್ತನ ಉದ್ಧಾರಕ್ಕಾಗಿ ನೀತಿ ಬೋಧೆ ಮಾಡಿ, ಅವನಲ್ಲಿರುವ ದುರ್ಗುಣ, ದುರಾಚಾರ, ದುಶ್ಚಟಗಳನ್ನು ಕಳೆದು ಶುದ್ಧನನ್ನಾಗಿ ಮಾಡಿದ ನಂತರವೇ ತಂದೆಯಂತಿರುವ ದೇವನ ಒಲುಮೆ ಪಡೆಯಲು ಸಾಧ್ಯ ಎಂದು ಗುರುವಿನ ಮಾತೃ ಹೃದಯದ ಪರಿಚಯ ಮತ್ತು ದೇವರ ದಂಡ ಸಂಹಿತೆಯನ್ನು ಮನದಟ್ಟು ಮಾಡಿಕೊಡುತ್ತಿದ್ದರು. ಶರಣ ಬಂಧುಗಳೆ, ಶರಣರ ಅಭಿಮತ ಮತ್ತು ಅನುಭವವನ್ನು ಅವಲೋಕಿಸಿದರೆ ದೇವರನ್ನು ಮೆಚ್ಚಿಸುವುದಕ್ಕಿಂತ ಮಾತೃ ಹೃದಯಿ ಗುರು ಬಸವಣ್ಣನವರನ್ನು ಮೆಚ್ಚಿಸುವುದು ಸುಲಭವಾಗಿತ್ತು. ಏಕೆಂದರೆ ಅಪ್ಪ ಬಸವಣ್ಣನವರು 'ಮೆಲ್ಲನೆ ಮೆಲ್ಲನೆ ಭಕ್ತ, ಮೆಲ್ಲನೆ ಮೆಲ್ಲನೆ ಮಾಹೇಶ್ವರ....' ಎಂದು ಅವರವರ ಶಕ್ತಿ ಸಾಮರ್ಥ್ಯಕ್ಕೆ ತಕ್ಕಂತೆ ಸಾಧನೆಯ ಹಾದಿಯಲ್ಲಿ ಮುಂದುವರಿಯಲು ಅನುವು ಮಾಡಿಕೊಡುತ್ತಿದ್ದು ಅಂತಿಮವಾಗಿ ಶರಣಸಾಧಕರ ಹೃನ್ಮನದಲ್ಲಿ ತಾವೇ ನೆಲೆ ನಿಲ್ಲುತ್ತಿದ್ದರು. ಅದಕ್ಕೆ ಅಲ್ಲವೆ, ಅಲ್ಲಮ ಪ್ರಭುದೇವರು 'ಗುಹೇಶ್ವರ ಲಿಂಗಕ್ಕೆ ವಿಳಾಸವಾದೆಯೆಲ್ಲ ಸಂಗನ ಬಸವಣ್ಣ' ಎಂದು ಸ್ತುತಿಸಿದ್ದು.

ಓದುಗರಿಗೆ ವಿಶೇಷ ಸೂಚನೆ

ನೀವು ಉತ್ತಮ ಚಿಂತಕರು ಹಾಗೂ ಲೇಖಕರಾಗಿದ್ದರೆ ವಿಶೇಷ ಲೇಖನಗಳನ್ನು ಡಿಟಿಪಿ ಮಾಡಿ **basavakumaraswamiji@gmail.com, kalyana.kirana1134@gmail.com** ಮೇಲ್‌ಗೆ ಕಳುಹಿಸಿ

ವಚನ ಸಾಹಿತ್ಯದ ಬಹುಮುಖಿ ಚಿಂತನೆ-3

-ಸಚ್ಚಿದಾನಂದ ಚಟ್ನಳಿ

ಬೇಸಿಗೆಯ ರಜೆ ಕಳೆದು ಮತ್ತೆ ಶಾಲಾ ಕಾಲೇಜುಗಳು ಪುನರಾರಂಭವಾಗಿವೆ. ವಿದ್ಯಾರ್ಥಿಗಳು ಯಾವ ವಿಷಯಗಳನ್ನು ಓದಬೇಕು ಎನ್ನುವ ದ್ವಂದ್ವದಲ್ಲಿದ್ದಾರೆ. ಪಾಲಕರು ತಮ್ಮ ತಮ್ಮ ಮಕ್ಕಳ ಭವಿಷ್ಯದ ಬಗ್ಗೆ ಚಿಂತಿತರಾಗಿದ್ದಾರೆ. ಶಿಕ್ಷಣ ಸಂಸ್ಥೆಗಳು ಹತ್ತು ಹಲವು ವಿಷಯಗಳ ಬೋಧನೆಗೆ ಸಿದ್ಧತೆ ಮಾಡಿಕೊಂಡು ಹಣ ಸಂಪಾದಿಸಲು ಕಾತುರರಾಗಿವೆ. ಇಂಥ ಸಂದರ್ಭದಲ್ಲಿ ವಚನ ಸಾಹಿತ್ಯವು ಶಿಕ್ಷಣದ ಮಹತ್ವದ ಬಗ್ಗೆ ಎಂಥ ಶಿಕ್ಷಣ ನಮ್ಮ ಮಕ್ಕಳಿಗೆ ಕೊಡಿಸಬೇಕು ಎನ್ನುವ ಬಗ್ಗೆ ಮಾಡುವ ಚಿಂತನೆಯನ್ನು ಮೆಲಕು ಹಾಕೋಣ.

"ಮನುಷ್ಯನು ಆಕಾಶದಲ್ಲಿ ಹಕ್ಕಿಯಂತೆ ಹಾರಲು ಕಲಿತಿದ್ದಾನೆ, ನೀರಿನಲ್ಲಿ ಮೀನಿನಂತೆ ಈಜಲು ಕಲಿತಿದ್ದಾನೆ, ಆದರೆ ಮಾನವನಂತೆ ಬದುಕಲು ಕಲಿತಿಲ್ಲ" ಎಂದು ನಮ್ಮ ದೇಶದ ರಾಷ್ಟ್ರಾಧ್ಯಕ್ಷರಾಗಿದ್ದ ಎಸ್. ರಾಧಾಕೃಷ್ಣನ್‌ರವರು ಹೇಳಿದ್ದಾರೆ. ಹುಟ್ಟು ಗುಣಗಳಲ್ಲಿ ಬದುಕುವುದು ಪ್ರಾಣಿಗಳ ಲಕ್ಷಣ. ಕಲಿತ ಗುಣಗಳಲ್ಲಿ ಬದುಕುವುದು ಮನುಷ್ಯನ ಲಕ್ಷಣ. ಸಂಸ್ಕಾರಗೊಂಡ ದಿವ್ಯ ಗುಣಗಳಲ್ಲಿ ಬದುಕುವುದು ಮಹಾತ್ಮರ ಜ್ಞಾನಿಗಳ ಲಕ್ಷಣ. ಇಂಥ ಮಹಾತ್ಮರನ್ನು,ಜ್ಞಾನಿಗಳನ್ನು ರೂಪಿಸುವುದೇ ಶಿಕ್ಷಣದ ಗುರಿ. ಶಿಕ್ಷಣವು ಮನುಷ್ಯನ ಕರ, ಉರ, ಶಿರಗಳಿಗೆ ಸಂಸ್ಕಾರ ನೀಡಿ ಅವುಗಳಲ್ಲಿ ದಿವ್ಯತ್ತ್ವವನ್ನು ತುಂಬಬೇಕು. ಕರಕ್ಕೆ (ಕೈ) ಸಂಸ್ಕಾರ ನೀಡುವುದೆಂದರೆ. ವ್ಯಕ್ತಿಯ ಕ್ರಿಯೆ ಮತ್ತು ಚಟುವಟಿಕೆಯನ್ನು ಶುದ್ಧಗೊಳಿಸಬೇಕು, ಕ್ರಿಯೆಯು ಸತ್ಕ್ರಿಯೆಯಾಗಬೇಕು ಉರ (ಹೃದಯ)ಕ್ಕೆ ಸಂಸ್ಕಾರ ಕೊಟ್ಟು ಅಲ್ಲಿ ಸದ್ಭಾವಗಳನ್ನು ಅಳವಡಿಸಬೇಕು. ಶಿರಕ್ಕೆ ಸಂಸ್ಕಾರಕೊಟ್ಟು ಅಲ್ಲಿ ಸುಜ್ಞಾನವನ್ನು ತುಂಬಬೇಕು."

ಆದರೆ ಇಂದು ಶಿಕ್ಷಣ ವ್ಯವಸ್ಥೆ ತುಂಬಾ ಕೆಟ್ಟುಹೋಗಿದೆ. ವಿದ್ಯಾವಂತರು ಎಷ್ಟು ಮೋಸ, ವಂಚನೆ, ಅನ್ಯಾಯ ಮಾಡುತ್ತಿದ್ದಾರೋ ಅವರಷ್ಟು ಅವಿದ್ಯಾವಂತರು ಮಾಡುತ್ತಿಲ್ಲ. ಸಾಕ್ಷರತೆ ಹೆಚ್ಚಾದಂತೆ ಮನುಷ್ಯನಲ್ಲಿ ರಾಕ್ಷಸಿ ಪ್ರವೃತ್ತಿ ಬೆಳೆಯುತ್ತಿದೆ. ವಿದ್ಯಾವಂತನಾಗಿ ವೈದ್ಯನಾದ ಒಬ್ಬ ವ್ಯಕ್ತಿ ಸದ್ಗುಣಿ, ಸುಜ್ಞಾನಿ ಮತ್ತು ಸದ್ಭಾವವುಳ್ಳವನಾಗಿದ್ದರೆ ರೋಗಿಯನ್ನು ಪ್ರೀತಿಯಿಂದ ಕಂಡು ಆದಷ್ಟು ಕಡಿಮೆ ಖರ್ಚಿನಲ್ಲಿ ಚಿಕಿತ್ಸೆಯನ್ನು ನೀಡುತ್ತಾನೆ. ಆದರೆ ಅನೇಕ ವೈದ್ಯರು ಯಾವುದೇ ಭಾವನೆಗಳಿಲ್ಲದೆ ರೋಗಿಯಿಂದ ಹಣವನ್ನು ಕೀಳುತ್ತಾರೆ. ವೈದ್ಯರಷ್ಟೇ ಅಲ್ಲ ಎಲ್ಲಾ ಕ್ಷೇತ್ರದ ವಿದ್ಯಾವಂತರೂ ಹಣಕ್ಕಾಗಿ ಏನು ಬೇಕಾದರೂ ಮಾಡಲು ಸಿದ್ಧರಾಗಿ ಕುಳಿತ್ತಿದ್ದಾರೆ.

ಕೇವಲ ಹಣ ಗಳಿಸುವುದೇ ಶಿಕ್ಷಣದ ಗುರಿಯಲ್ಲ. ಒಂದು ಸುವ್ಯವಸ್ಥಿತವಾದ ಮಾನವ ಜನಾಂಗ ನಿರ್ಮಾಣ ಮಾಡುವುದು ಶಿಕ್ಷಣದ ಗುರಿಯಾಗಬೇಕು. ಇದರಲ್ಲಿ ಶಿಕ್ಷಕನ ಪಾತ್ರ ಅತೀ ಮುಖ್ಯವಾಗಿದೆ. ಶಿಕ್ಷಕನು ಮಕ್ಕಳಿಗೆ ಕೇವಲ ಓದು ಬರಹ ಕಲಿಸುವಂಥ ವ್ಯಕ್ತಿ ಮಾತ್ರವಲ್ಲ ಅವನು ದೇಶದ ರಕ್ಷಕ ಅದರಲ್ಲೂ ಪ್ರಾಥಾಮಿಕ ಹಾಗೂ ಪ್ರೌಢಶಾಲೆ ಶಿಕ್ಷಕರ ಜವಾಬ್ದಾರಿ ಅತೀ ಹೆಚ್ಚಿನದು. ಮಕ್ಕಳು ಬಾಲ್ಯದಲ್ಲಿ ಯಾವ ಆದರ್ಶಗಳನ್ನು

ಕಲಿಯುತ್ತಾರೋ ಅವುಗಳೇ ಅವರಲ್ಲಿ ಶಾಶ್ವತವಾಗಿ ನೆಲೆಗೊಳ್ಳುತ್ತವೆ. ಆದರೆ ಇಂದು ಅನೇಕ ಶಿಕ್ಷಕರು ಹಿಂದಿನ ಕಾಲದಂತೆ ತಮ್ಮ ವೃತ್ತಿಯ ಪಾವಿತ್ರ್ಯತೆಯನ್ನು ಕಾಪಾಡಿಕೊಳ್ಳುತ್ತಿಲ್ಲ. ಅನೇಕ ಆಸೆ - ಆಕಾಂಕ್ಷೆಗಳಿಗೆ ಬಲಿಯಾಗಿ ತಮ್ಮ ಮೂಲ ಕರ್ತವ್ಯವನ್ನು ಮರೆಯುತ್ತಿದ್ದಾರೆ. ಮೌಲ್ಯಯುತ ಶಿಕ್ಷಣವನ್ನು ಕೊಡುವುದರಲ್ಲಿ ಹಿಂದೆ ಬಿದ್ದಿದ್ದಾರೆ. ಇಂದು ಹಳ್ಳಿಗಳಲ್ಲಿ ಪ್ರೌಢಶಾಲೆಗಳಿಗೆ ಹೋಗುವ ವಿದ್ಯಾರ್ಥಿಗಳಿಗು ಅಲ್ಪ ಸ್ವಲ್ಪವಾದರೂ ಇಂಗ್ಲೀಷ್ ಬರುವುದಿಲ್ಲ. ಗಣಿತದ ಲೆಕ್ಕಗಳಂತೂ ಮೊದಲೇ ಬರಲ್ಲ. ನಾವೆಲ್ಲ ಪ್ರೌಢಶಾಲೆ ಓದುವಾಗ ಶಿಕ್ಷಕರು ವಿದ್ಯಾರ್ಥಿಗಳ ಬಗ್ಗೆ ತುಂಬಾ ಕಾಳಜಿ ವಹಿಸುತ್ತಿದ್ದರು. ಅಂಥ ಕಾಳಜಿ ಇಂದಿನ ಯುವ ಶಿಕ್ಷಕರಲ್ಲಿ ಮರೆಯಾಗುತ್ತಿದೆ. ಇದರಲ್ಲಿ ಮೇಲಾಧಿಕಾರಿಗಳ ಪಾತ್ರವೂ ಇದೆ.

ಹಳ್ಳಿಗಳಲ್ಲಿ ಶಾಲೆಗಳ ಪರಿಸ್ಥಿತಿ ತುಂಬಾ ಗಂಭೀರವಾಗಿದೆ. ಅನೇಕ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ತುಂಬಾ ಕಡಿಮೆಯಿದೆ ಮತ್ತೆ ಅನೇಕ ಕಡೆಗಳಲ್ಲಿ ಶಾಲೆಯಲ್ಲಿ ಮಕ್ಕಳೇ ಇರುವುದಿಲ್ಲ. ಈ ಬಗ್ಗೆ ಶಿಕ್ಷಕರಿಗಾಗಲೀ, ಪಾಲಕರಿಗಾಗಲೀ ಯಾವುದೇ ಚಿಂತೆಯಿಲ್ಲ. ಶಿಕ್ಷಕರು ನಾವು ಸುಮ್ಮನೆ ಕುಳಿತರೂ ಸಂಬಳ ಬರುತ್ತದೆ ಎಂದು ನಿಶ್ಚಿಂತರಾಗಿದ್ದಾರೆ. ಬಡತನದ ಬವಣೆಯಲ್ಲಿ ಬೇಯುವ ಅನೇಕ ಪಾಲಕರು, ಮಕ್ಕಳು ಶಾಲೆಗೆ ಹೋಗದೆ ಇದ್ದಾಗ ಅವರಿಗೆ ಬೈದು ಶಾಲೆಗೆ ಕಳುಹಿಸದೇ, ತನಗೆ ಸಹಾಯವಾಗುತ್ತದೆ ಎಂದು ಕೆಲಸಕ್ಕೆ ಕರೆದುಕೊಂಡು ಹೋಗುತ್ತಾರೆ. ಇನ್ನು ಶಾಲೆಗೆ ಬರುವ ಅಲ್ಪಸ್ವಲ್ಪ ವಿದ್ಯಾರ್ಥಿಗಳಿಗೆ ಪಾಠಗಳ ಕಡೆಗೆ ಗಮನವೇ ಇರುವುದಿಲ್ಲ.

ವಿದ್ಯೆಯು ಸಂಪತ್ತಿನ ಕಾಲದಲ್ಲಿ ನಮಗೆ ಆಭರಣದಂತೆ, ಆಪತ್ತಿನ ಕಾಲದಲ್ಲಿ ಅದು ಪರಮ ಆಶ್ರಯ. ಅದಕ್ಕಾಗಿ ವಿದ್ಯಾರ್ಥಿ ಬಂಧಗಳೇ ತಮ್ಮ ಗಮನ ವಿದ್ಯೆಯನ್ನು ಗಳಿಸಿಕೊಳ್ಳುವುದರ ಕಡೆಗೆ ಇರಲಿ.

ವಿದ್ಯೆಯುಳ್ಳವನ ಮುಖವು। ಮುದ್ದು ಬರುವಂತಿಕ್ಕು
ವಿದ್ಯೆಯಿಲ್ಲದವನ ಬರಿ ಮುಖವು। ಹಾಳೂರ
ಹದ್ದಿನಂತಿಕ್ಕು ಸರ್ವಜ್ಞ॥

ಇದ್ದಲ್ಲಿ ಸಲುವ। ಹೋಗಿದ್ದಲ್ಲಿಯೂ ಸಲುವ।
ವಿದ್ಯೆಯು ಕಲಿತ ಬಡವ ತಾ ಗಿರಿಯ। ಮೇ
ಲಿದ್ದರೂ ಸಲುವ ಸರ್ವಜ್ಞ॥

ವಿದ್ಯೆಯು ಅಂತರಂಗದ ಅಕ್ಷಯ ನಿಧಿ ಇದ್ದ ಹಾಗೆ ಅದನ್ನು ಯಾರೂ ಕಿತ್ತುಕೊಳ್ಳಲಿಕ್ಕೆ ಆಗುವುದಿಲ್ಲ.

ಒಡಲೊಳಗಡಗಿದ ವಿದ್ಯೆ। ಒಡಗೂಡಿ ಬರುತ್ತಿರಲು
ಒಡಹುಟ್ಟಿದವರು, ಕಳ್ಳರು, ನೃಪರದನು।
ಪಡೆಯರೆಂತೆಂದ ಸರ್ವಜ್ಞ॥

ವಿದ್ಯೆಗೆ ಎಲ್ಲಿಲ್ಲದ ಗೌರವ ಕೊಡುವ ಕಾಲವಿತ್ತು. ಮಕ್ಕಳು ತುಂಟತನ ಮಾಡಿದರೆ ಗುರುಗಳು ಅವರನ್ನು ಹೊಡೆದು ಬಡಿದು ದಾರಿಗೆ ತರುತ್ತಿದ್ದರು. ಆದರೆ ಇಂದಿನ ವ್ಯವಸ್ಥೆ ತೀರಾ ಬದಲಾಗಿದೆ. ಗುರು ಅಲ್ಲಮ ಪ್ರಭುದೇವರು ಇಂದಿನ ಶಿಕ್ಷಣ ವ್ಯವಸ್ಥೆಯ ಬಗ್ಗೆ ಈ ರೀತಿ ಹೇಳುತ್ತಾರೆ.

ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದಡೆ,
ಆಗಲಿ ಮಹಾ ಪ್ರಸಾದವೆಂದೆನಯ್ಯಾ,
ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ ಕಲಿಸಿದಡೆ,
ಆಗಲಿ ಮಹಾ ಪ್ರಸಾದವೆಂದೆನಯ್ಯಾ,
ದ್ವಾಪರಯುಗದಲ್ಲಿ ಶ್ರೀಗುರು ಶಿಷ್ಯಂಗೆ ಝುಂಕಿಸಿ ಬುದ್ಧಿಯ ಕಲಿಸಿದಡೆ,
ಆಗಲಿ ಮಹಾ ಪ್ರಸಾದವೆಂದೆನಯ್ಯಾ,
ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದಡೆ,
ಆಗಲಿ ಮಹಾ ಪ್ರಸಾದವೆಂದೆನಯ್ಯಾ,
ಗುಹೇಶ್ವರಾ ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾನು ಬೆರಗಾದೆನಯ್ಯಾ.
(ಅ.ವ.ಸಂ.–52)

ವಿದ್ಯಾರ್ಥಿಗಳ ಕಲಿಕಾ ಮನೋಭಾವನೆಯಲ್ಲಿ ತುಂಬಾ ಬದಲಾವಣೆಯಾಗಿದೆ. ಅನೇಕ ಜನ ಪಟ್ಟಣದಲ್ಲಿ ವಾಸಿಸುವ ಪಾಲಕರಿಗೆ ಇಂದಿನ ಕಾಲದಲ್ಲಿ ತಮ್ಮ ಮಕ್ಕಳೊಂದಿಗೆ ಮಾತನಾಡಲಿಕ್ಕೂ ಸಮಯವಿಲ್ಲ. ಮಗು ಬೆಳಿಗ್ಗೆ ಏಳುವುದಕ್ಕಿಂತ ಮುಂಚೆ ಮನೆ ಬಿಟ್ಟರೆ, ಮಗು ಮಲಗಿದ ಮೇಲೆಯೇ ಮನೆ ಸೇರುತ್ತಾರೆ. ಇನ್ನು ಅನೇಕ ಜನ ಪೋಷಕರು ತಮ್ಮ ಮಕ್ಕಳನ್ನು ವಸತಿ ಶಾಲೆಗಳಲ್ಲಿ ಕಾನ್ವೆಂಟ್‌ಗಳಲ್ಲಿ ಬಿಡುತ್ತಾರೆ. ಆಗ ಮಕ್ಕಳು ಕಾನ್ವೆಂಟ್‌ಗಳ ಸಂಸ್ಕೃತಿ, ತಮ್ಮ ಸುತ್ತಲಿನ ವಾತಾವರಣದಂತೆ ಹೃದಯ ಶೂನ್ಯರಾಗಿ ಬೆಳೆಯುತ್ತಾರೆ. ಇಂಥ ವಿದ್ಯಾರ್ಥಿಗಳ ತಲೆ ದೊಡ್ಡದಾಗಬಹುದು ಆದರೆ ಹೃದಯ ಸಂಕುಚಿತವಾಗುತ್ತದೆ. ಇಂಥವರಿಂದ ಶುದ್ಧ ಭಾರತೀಯ ಸಂಸ್ಕೃತಿಯನ್ನು ನಿರೀಕ್ಷಿಸಲು ಸಾಧ್ಯವೇ ಇಲ್ಲ. ಮಕ್ಕಳು ಬಾಲ್ಯದಲ್ಲಿ ತಾಯಿ ತಂದೆಯರ ಹಾಗೂ ಹಿರಿಯರ ಆಶ್ರಯದಲ್ಲಿಯೇ ಬೆಳೆಯಬೇಕು.ಆಗ ಮಾತ್ರ ಅವರಿಗೆ ಧಾರ್ಮಿಕ, ನೈತಿಕ ಆಧ್ಯಾತ್ಮಿಕವಾದ ಶಿಕ್ಷಣವೂ ದೊರೆಯುತ್ತದೆ.

ವಿದ್ಯೆ ಕಲಿಸದ ತಂದೆ ಬುದ್ಧಿ ಹೇಳದ ಗುರುವು
ಬಿದ್ದಿರಲು ಬಂದು ನೋಡದ ತಾಯಿ । ಇವರು
ಶುದ್ಧ ವೈರಿಗಳು, ಸರ್ವಜ್ಞ

ಎನ್ನುವ ಸರ್ವಜ್ಞ ವಾಣಿಯಂತೆ ತಂದೆಯು ಮಕ್ಕಳಿಗೆ ಎಲ್ಲಾ ರೀತಿಯ ವಿದ್ಯೆಯನ್ನು ಕಲಿಸಬೇಕು. ಅದರಲ್ಲೂ ಭಕ್ತಿ ಎನ್ನುವಂಥದ್ದು ಹೃದಯದ ವಿದ್ಯೆ. ಅದು ಭವರೋಗ ಕಳೆಯುವ ವಿದ್ಯೆ. ಇಂಥ ವಿದ್ಯೆಯನ್ನು ಕೂಡ ಪೋಷಕರು ತಮ್ಮ ಮಕ್ಕಳಿಗೆ ಕೊಡಬೇಕು. ಗುರುವಾದವರು, ಕೇವಲ ಪಠ್ಯ ವಿಷಯಗಳನ್ನು ಬೋಧಿಸದೆ, ನೈತಿಕ ಪ್ರಜ್ಞೆ,ದೇಶ ಭಕ್ತಿಯನ್ನು ಮಕ್ಕಳಲ್ಲಿ ಬೆಳೆಸಬೇಕು. "ಒದು ಒಕ್ಕಾಲು ಬುದ್ಧಿ ಮುಕ್ಕಾಲು" ಎನ್ನುವ ಗಾದೆ ಮಾತಿನಂತೆ ತಲೆಯನ್ನು ಹಿರಿದಾಗಿ ಮಾಡುವ ಶಿಕ್ಷಣಕ್ಕಿಂತ, ಹೃದಯ ವೈಶಾಲ್ಯತೆಯನ್ನು ಬೆಳೆಸುವ ಶಿಕ್ಷಣದ ಅವಶ್ಯಕತೆ ಎಂದಿಗಿಂತಲೂ ಇಂದು ಹೆಚ್ಚು ಪ್ರಸ್ತುತವಾಗಿದೆ.

ಇಂಥ ಶಿಕ್ಷಣವನ್ನು ಕೊಡುವಲ್ಲಿ, ಪಡೆಯುವಲ್ಲಿ, ಕೊಡಿಸುವಲ್ಲಿ, ಶಿಕ್ಷಕ–ಬಾಲಕ–ಪಾಲಕರು ಶ್ರಮಿಸಬೇಕಾಗಿ ನಮ್ರವಾಗಿ ಕೇಳಿಕೊಳ್ಳುತ್ತೇನೆ.

ಅಂತರಂಗ

– ಪೂಜ್ಯ ಶ್ರೀ ಜಗದ್ಗುರು
ಚನ್ನಬಸವಾನಂದ ಸ್ವಾಮೀಜಿ

1. ಪ್ರಾಣಿ ಬಲಿ ಬೇಡ

ದೇವಿ–ದೇವತೆಗಳ ಹೆಸರಿನಲ್ಲಿ ಮುಗ್ಧ ಪ್ರಾಣಿಗಳನ್ನು ಬಲಿಕೊಡುವುದೇ ಕೆಲವರಿಗೆ ಹಬ್ಬ. ತಮ್ಮ ಮಕ್ಕಳು ಸತ್ತಾಗ ಆಕಾಶವೇ ಕಳಚಿ ಬಿದ್ದಂತೆ ಅಳುವ ಈ ಜನ, ಯಾವ ಅಳುಕು ಇಲ್ಲದೆ ನೂರಾರು ಕುರಿ ಮರಿಗಳನ್ನು, ಹೋತಗಳನ್ನು, ಕೋಳಿಗಳನ್ನು ಕತ್ತರಿಸಿ ದೇವಿಗೆ ಅರ್ಪಿಸಿ ತಾವೇ ತಿನ್ನುತ್ತಾರೆ. ಇದು ಯಾವ ನ್ಯಾಯ? ದೇವಿ ತಾಯಿ ಸಮಾನ. ತಾಯಿ ಎಂದಾದರೂ ತಮ್ಮ ಮಗುವಿನ ರಕ್ತ ಕುಡಿಯಲು ಬಯಸುವಳೇ! ಇಲ್ಲ. ಹಾಗಾದರೆ ದ್ಯಾಮವ್ವ, ದುರ್ಗವ್ವಗಳ ಹೆಸರಲ್ಲಿ ಯಾಕೆ ಬಲಿ? ಇದು ಅನ್ಯಾಯವಲ್ಲವೇ?

ಗುರು ಬಸವಣ್ಣನವರು ಚಿಕ್ಕ ಬಾಲಕರಿದ್ದಾಗ ಒಂದು ಘಟನೆ ನಡೆಯಿತು. ಹೀಗೆ ಒಂದು ಮನೆಯಲ್ಲಿ ಬಲಿ ಕೊಡುವ ಹಬ್ಬ ಆಚರಿಸಲಾಗುತ್ತಿತ್ತು. ಹರಕೆಯ ಕುರಿಯನ್ನು ತಂದು ಕಟ್ಟಿದ್ದಾರೆ. ತಳಿರು–ತೋರಣಗಳನ್ನು ಕಟ್ಟಿ ಮನೆಯನ್ನು ಶೃಂಗಾರ ಮಾಡಿದ್ದಾರೆ. ಆ ಕುರಿಗೆ ಹೊಟ್ಟೆ ಹಸಿದಿದೆ. ಮನೆಯ ಮುಂದೆ ಕಟ್ಟಿರುವ ತಳಿರನ್ನು ತಿನ್ನಲು ಪ್ರಯತ್ನಿಸುತ್ತಿದೆ. ಬಾಲಕ ಬಸವಣ್ಣನವರು ಈ ದೃಶ್ಯವನ್ನು ಕಣ್ಣಾರೆ ನೋಡಿ ಹೀಗೆ ಹೇಳುತ್ತಾರೆ ನೋಡಿ,

ಹಬ್ಬಕ್ಕೆ ತಂದ ಹರಕೆಯ ಕುರಿಯು
ತೋರಣಕ್ಕೆ ತಂದೆ ತಳಿರು ಮೇಯಿತ್ತು
ಆದಂದೆ ಹುಟ್ಟಿತ್ತು; ಆದಂದೆ ಹೊಂದಿತ್ತು.
ಕೊಂದವರುಳಿವರೇ ಅಯ್ಯಾ? ಕೂಡಲ ಸಂಗಮದೇವಾ.

ಮುಗ್ಧ ಪ್ರಾಣಿ ಕುರಿಯು ಹುಟ್ಟುತ್ತದೆ. ಸಾಯುತ್ತದೆ. ಆದರೆ ಜ್ಞಾನಿ ಎನಿಸಿಕೊಂಡವನು ಈ ರೀತಿ ಮಾಡಬಾರದು. ದೇವತೆಗಳ ಹೆಸರಿನಲ್ಲಿ ಪ್ರಾಣಬಲಿ ನೀಡುವುದನ್ನು ಬಾಲಕರಿದ್ದಾಗಲೆ ಬಸವಣ್ಣನವರು ಖಂಡಿಸಿದ್ದಾರೆ. ಎಲ್ಲರಲ್ಲೂ ಪರಮಾತ್ಮನ ಅಂಶವಿದೆ. 'ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವುದೆ ನಿಜವಾದ ಧರ್ಮ, ಎಂದು ಸಾರಿದರು ವಿಶ್ವಧರ್ಮ ಬಸವಣ್ಣನವರು.

2.ವ್ಯಕ್ತಿಗಳನ್ನು ಪ್ರೀತಿಸಿ

ದೇವನೊಬ್ಬನೆ ತಂದೆ ಮನುಜರೆಲ್ಲರು ಒಂದೆ ಎಂದು ಪ್ರವಾದಿಗಳು, ಶರಣರು ಸಾರಿದ್ದಾರೆ. ಆದರೆ ಇಂದು ಮಾನವ–ಮಾನವರ ನಡುವಿನ ಅಂತರವು ದಿನೇ ದಿನೇ ಹೆಚ್ಚಾಗುತ್ತಿದೆ. ಮನುಷ್ಯನ ಸುಖವು ಆತನು ತನ್ನ ಪರಿಸರ–ಕುಟುಂಬದಲ್ಲಿನ ಸದಸ್ಯರನ್ನು ಎಷ್ಟರಮಟ್ಟಿಗೆ ಪ್ರೀತಿಸುವನು ಎಂಬುದರ ಮೇಲೆ ಅವಲಂಬಿತವಾಗಿದೆ. ಗಂಡ–ಹೆಂಡತಿ, ತಾಯಿ–ಮಗಳು, ತಂದೆ–ಮಗ, ಅಜ್ಜ–ಅಜ್ಜಿ, ಅತ್ತೆ–ಮಾವ ಈ ಸಂಬಂಧಗಳನ್ನು ಗಟ್ಟಿಯಾಗಿ ಉಳಿಸಿಕೊಂಡಾಗ ಕುಟುಂಬ ಉಳಿಯುತ್ತದೆ. ಮೊದಲಿನ ಕಾಲದಲ್ಲಿ ಕುಟುಂಬ ಎಂದರೆ, ಅಜ್ಜ–ಅಜ್ಜಿ, ಅತ್ತೆ–ಮಾವ, ಚಿಕ್ಕಪ್ಪ–ದೊಡ್ಡಪ್ಪ ಹೀಗೆ 30–40 ಜನ ಸದಸ್ಯರ

ಒಕ್ಕೂಟವಾಗಿರುತ್ತಿತ್ತು. ಆದರೆ ಇಂದು ಗಂಡ-ಹೆಂಡತಿ ಒಂದೋ ಎರಡೋ ಮಕ್ಕಳು ಇಷ್ಟಕ್ಕೆ ಸೀಮಿತವಾಗಿದೆ. ಸೋದರತ್ತೆ-ಸೋದರಮಾವ ತಮ್ಮ ಅಳಿಯಂದಿರನ್ನು ಎಷ್ಟು ಪ್ರೀತಿಸುತ್ತಿದ್ದರು. ಆದರೆ ಇವತ್ತಿನ ಆಂಗ್ಲ ಮಾಧ್ಯಮದಲ್ಲಿ ಓದುವ ಮಕ್ಕಳಿಗೆ ಸೋದರತ್ತೆ-ಸೋದರಮಾವ ಎಂಬ ಶಬ್ದಗಳೆ ಗೊತ್ತಿಲ್ಲ. ನಾಲ್ಕು ಶಬ್ದಗಳು ಮಾತ್ರ ಅವ್ವನ ತಂಗಿಯೊ ಆಂಟಿನೆ, ಅಪ್ಪನ ತಂಗಿಯೂ ಆಂಟಿನೆ. ಯಾವ ವ್ಯತ್ಯಾಸವೂ ಇಲ್ಲ. ತಂದೆ-ತಾಯಿಗಳು ತಮ್ಮ ಮಕ್ಕಳಿಗಿಂತ ಮೊಬೈಲ್ ಫೋನನ್ನು ಹೆಚ್ಚಾಗಿ ಪ್ರೀತಿಸುತ್ತಾರೆ. ಮಕ್ಕಳು ಸಹ ತಾಯಿ-ತಂದೆಗಿಂತ ಹೆಚ್ಚಾಗಿ ಮೊಬೈಲ್ ಗೇಮನ್ನು ಪ್ರೀತಿಸುವರು. ಮಾನವ ಎಂದು ಸಾಧನ ವಸ್ತುಗಳನ್ನು ಪ್ರೀತಿಸುತ್ತಿದ್ದಾನೆ. ಆದರೆ ವ್ಯಕ್ತಿಗಳನ್ನು ಬಳಸಿಕೊಳ್ಳುತ್ತಿದ್ದಾನೆ. ಹಾಗೆ ಮಾಡಬಾರದು ಸಾಧನಗಳನ್ನು ಬಳಸಿಕೊಳ್ಳೋಣ. ವ್ಯಕ್ತಿಗಳನ್ನು ಪ್ರೀತಿಸೋಣ. ಜೀವನ ಸಾರ್ಥಕ ಪಡಿಸಿಕೊಳ್ಳೋಣ.

3. ಶ್ರೀ ಮಹಾಕಾರಣಿಕ ಬಸವಣ್ಣನವರು

ಹರಿಹರ ಮಹಾಕವಿಯು ಗುರು ಬಸವಣ್ಣನವರ ಜೀವನ ಚರಿತ್ರೆ ಬರೆಯುವಾಗ ಕೈಲಾಸದಲ್ಲಿ ಹೂವಿನ ಪ್ರಸಾದವನ್ನು ಷಣ್ಮುಖನಿಗೆ ಕೊಡದೆ ತಾರತಮ್ಯ ಮಾಡಿದ್ದಕ್ಕಾಗಿ ನೀನು ಮನುಷ್ಯ ಜನ್ಮಕ್ಕೆ ಹೋಗಿ ಪ್ರಸಾದ ತತ್ವವನ್ನು ತಿಳಿಸಿ ಬಾ ಎಂದು ವೃಷಭನಿಗೆ ಶಿವನು ಶಾಪಕೊಟ್ಟ ಪರಿಣಾಮವಾಗಿ ವೃಷಭ (ನಂದಿ)ನು ಭೂಲೋಕದಲ್ಲಿ ಅವತರಿಸಿ ಬಂದ ಎಂಬುದು ಹರಿಹರನ ಕಲ್ಪನೆ.

ಭೀಮಕವಿಯ ಕಲ್ಪನೆಯ ಪ್ರಕಾರ ಶಿವನ ಒಡ್ಡೋಲಗದಲ್ಲಿ ಶಿವ-ಪಾರ್ವತಿಯರು ಕುಳಿತಿರುತ್ತಾರೆ. ನಾರದ ಮುನಿಗಳು ಬಂದು ಭೂಲೋಕದ ವೃತ್ತಾಂತವನ್ನು ಶಿವನಿಗೆ ತಿಳಿಸುತ್ತಾರೆ. ಕೆಲವರು ನಾವೇ ಸನ್ಯಾಸಿಗಳು, ಜ್ಞಾನಿಗಳು ಎಂದು ಗುಡ್ಡಗಾಡು ಸೇರಿದ್ದಾರೆ. ಇನ್ನೊಂದು ವರ್ಗದವರು ನಾವು ಸಂಸಾರಿಗಳು ನಮಗ್ಯಾಕೆ ಧರ್ಮ, ದೇವರು ಎಂದು ಭೋಗವಾದಿಗಳಾಗಿದ್ದಾರೆ. ಇವರಿಬ್ಬರಲ್ಲೂ ಸಮನ್ವಯತೆ ಮೂಡಿಸಿ ಧರ್ಮ, ಅರ್ಥ, ಕಾಮ, ಮೋಕ್ಷ ಎಲ್ಲರಿಗೂ ಸಮಾನ ಎಂದು ಸಾರುವ ಒಬ್ಬ ಗುರುವಿನ ಅಗತ್ಯವಿದೆ ಎಂದು ಹೇಳಿದಾಗ ಶಿವನು ನಂದಿಯೇ ಅದಕ್ಕೆ ಸೂಕ್ತವಾದ ವ್ಯಕ್ತಿ ಎಂದರಿದು ನಂದಿಯನ್ನು ಭೂಮಿಗೆ ಕಳುಹಿಸಿದ.

ಯಾವತ್ತೂ ಶೈವ ಕವಿಗಳು ಒಬ್ಬ ಮಹಾತ್ಮನ ಚರಿತ್ರೆ ಬರೆಯಲು ಪ್ರಾರಂಭಿಸಬೇಕಾದರೆ ಕೈಲಾಸ-ಶಿವ-ಪಾರ್ವತಿಯಿಂದ ಆರಂಭ ಮಾಡುತ್ತಾರೆ. ವೈಷ್ಣವರ ಕಥೆಯು ವಿಷ್ಣು-ಲಕ್ಷ್ಮೀ ಮತ್ತು ವೈಕುಂಠದಿಂದ ಹಿಡಿದು ಆರಂಭಿಸಿದ್ದು ಸಹಜ. ಆದರೆ ಹರಿಹರ ಕವಿಯ ಪ್ರಕಾರ ಶಿಕ್ಷೆ ಅನುಭವಿಸಲು ಹುಟ್ಟಿ ಬಂದರು ಎಂದಾಗುತ್ತದೆ. ಆದರೆ ಭೀಮಕವಿಯ ಪ್ರಕಾರ ಲೋಕದ ಉದ್ಧಾರ ಮಾಡಲು ಬಂದರು ಎಂಬ ಅರ್ಥವಿದೆ. ಇದು ಸೂಕ್ತವಾದ ಕಲ್ಪನೆ. ಲೋಕದ ಮಾನವರ ಶಾಪ ವಿಮೋಚನೆಗಾಗಿ ಅವತರಿಸಿ ಬಂದವರು ಗುರು ಬಸವಣ್ಣನವರು. ಕವಿಗಳ ಕಲ್ಪನೆ ಏನೇ ಆಗಿದ್ದರೂ ಬಸವಣ್ಣನವರು ಒಬ್ಬ ಕಾರಣಿಕ ಪುರುಷ, ಅವತಾರಿಕ ಪುರುಷ ಎಂಬುದರಲ್ಲಿ ಎರಡು ಮಾತಿಲ್ಲ. ಅಂತೆಯೇ ಅಲ್ಲಮಪ್ರಭು ದೇವರು ಹೇಳುತ್ತಾರೆ – "ಮರ್ತ್ಯಲೋಕದ ಮಹಾಮನೆ ಹಾಳಾಗಿ ಹೋಗಬಾರದೆಂದು ಕರ್ತನಟ್ಟಿದನಯ್ಯ ಬಸವಣ್ಣನ" ಎಂದು.

ಕೂಡಲ ಸಂಗಮದಲ್ಲಿ ಬಸವ ಭಾರತಿ
ಪಿಯು (ವಿಜ್ಞಾನ) ಕಾಲೇಜು ಕಟ್ಟಡ ಉದ್ಘಾಟನೆ

ಧರ್ಮಕ್ಷೇತ್ರ ಕೂಡಲ ಸಂಗಮದ ಮಹಾಮನೆ ಮಹಾಮತದ ಆವರಣದಲ್ಲಿ ಬಸವ ಭಾರತಿ ಪ್ರೌಢಶಾಲೆ ಹಾಗೂ ಕಾಲೇಜಿಗೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಅನುಮತಿ ದೊರೆತಿದ್ದು ಈಗ ಕಾಲೇಜು ಪ್ರಾರಂಭವಾಗಿದೆ. 12-07-2017 ಬುಧ (ಚನ್ನ) ದಂದು ಬಸವ ಭಾರತಿ ಪಿಯು ಕಾಲೇಜು ಕಟ್ಟಡ ಉದ್ಘಾಟನೆಗೊಳ್ಳಲಿದೆ. ಪೂಜ್ಯ ಶ್ರೀ ಮನ್ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಹಸ್ತದಿಂದ ನೆರವೇರಲಿದೆ. ಅಲ್ಲದೆ ರಾಜಕೀಯ ನೇತಾರರು, ಹಿರಿಯ ಮುಖಂಡರು ಕಾರ್ಯಕ್ರಮಕ್ಕೆ ಆಗಮಿಸಲಿದ್ದಾರೆ. ಆದಕಾರಣ ತಾವುಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮಕ್ಕೆ ಆಗಮಿಸಬೇಕೆಂದು ಕೋರುತ್ತೇವೆ.

ಅಲ್ಲದೆ ಈಗಾಗಲೇ 1ರಿಂದ 10ನೆಯ ತರಗತಿಗಳು ಯಶಸ್ವಿಯಾಗಿ ನಡೆಯುತ್ತಿದ್ದು ಶಾಲೆಯು ಒಳ್ಳೆಯ ಹೆಸರನ್ನು ಗಳಿಸಿ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿದೆ. ಇದೀಗ 2017ನೆಯ ಪ್ರವೇಶ ಪ್ರಾರಂಭವಾಗಿದೆ. ಅಲ್ಲವೆ ಪಿಯು ವಿಜ್ಞಾನ ಕಾಲೇಜ್ ಕೂಡ ಆರಂಭಿಸಲಾಗಿದೆ. ಪ್ರಶಾಂತವಾದ ವಾತಾವರಣ, ಅಚ್ಚುಕಟ್ಟಾದ ಊಟದ ವ್ಯವಸ್ಥೆ, ಉತ್ತಮ ಶಿಕ್ಷಕರಿಂದ ಬೋಧನೆ, ಧಾರ್ಮಿಕ ಸಂಸ್ಕಾರ, ಬಸವ ಭಾರತಿ ರೆಸಿಡೆನ್ಷಿಯಲ್ ಶಾಲೆಯಲ್ಲಿ ಲಭ್ಯವಾಗಲಿದೆ.

ವಿವರಗಳಿಗಾಗಿ ಸಂಪರ್ಕಿಸುವ ವಿಳಾಸ

ಮೊ: 9483748266 ಪೂಜ್ಯ ಶ್ರೀ ಸದ್ಗುರು ಮಾದೇಶ್ವರ ಸ್ವಾಮಿಗಳು

17-06-2017ರಂದು ಬಸವ ಗಂಗೋತ್ರಿಯಲ್ಲಿ
ರಾಜ್ಯ ಕಾರ್ಯಕಾರಿ ಸಭೆ

ಶರಣ ಬಂಧುಗಳಿಗೆ ಶರಣು ಶರಣಾರ್ಥಿ,

ದಿ.18-06-2017ರಂದು ಕುಂಬಳಗೋಡಿನ ಬಸವ ಗಂಗೋತ್ರಿಯಲ್ಲಿ ಬಸವೋತ್ಸವ (ಶ್ರೀ ಚನ್ನಬಸವೇಶ್ವರ ಜ್ಞಾನಪೀಠಾರೋಹಣ) ಕಾರ್ಯಕ್ರಮ ಇರುವುದು ತಮಗೆಲ್ಲ ತಿಳಿದೇ ಇದೆ. ಕಾರ್ಯಕ್ರಮದ ಹಿಂದಿನ ದಿನ ದಿ.17-6-2017, ಶನಿವಾರದಂದು ರಾಜ್ಯ ಕಾರ್ಯಕಾರಿ ಸಮಿತಿ ರಾಷ್ಟ್ರೀಯ ಬಸವ ದಳದ ಸಮಾವೇಶವು ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮೀಜಿಯವರ ನೇತೃತ್ವದಲ್ಲಿ ಬೆಳಿಗ್ಗೆ 11.30 ರಿಂದ 2.30ರವರೆಗೆ ಒಂದು ಸೆಷನ್, ಸಂಜೆ-4-30 ರಿಂದ 6-30ರವರೆಗೆ ಮತ್ತೊಂದು ಸೆಷನ್ ನಡೆಯಲಿದೆ. ರಾಷ್ಟ್ರೀಯ ಬಸವ ದಳಗಳ ಜವಾಬ್ದಾರಿ, ಸಂಘಟನೆ ಮತ್ತು ಅಭಿವೃದ್ಧಿ ಕುರಿತು ಚರ್ಚೆ ನಡೆಯಲಿದೆ. ಆದ್ದರಿಂದ ಎಲ್ಲಾ ರಾಷ್ಟ್ರೀಯ ಬಸವದಳದ ಪ್ರಮುಖರು ತಪ್ಪದೆ ಭಾಗವಹಿಸಬೇಕೆಂದು ಸೂಚನೆ.

ಶರಣ. ಕೆ. ವೀರೇಶ್
ಪ್ರಧಾನ ಸಂಘಟಕರು

ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ನಡೆಸುತ್ತಿರುವ
ಅನಾಥಾಲಯಗಳಿಗೆ ಪ್ರವೇಶಾವಕಾಶ

1. ಬೆಂಗಳೂರಿನ ಬಸವ ಗಂಗೋತ್ರಿಯಲ್ಲಿ ಬಸವ ಗಂಗೋತ್ರಿ ಅನಾಥಾಲಯ.
   ಸಂಪರ್ಕಿಸಬೇಕಾದವರು : ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
   9845399698 / 9448386717

   ಬಾಲಕರಿಗೆ 7ನೆಯ ತರಗತಿಯವರೆಗೆ ಮಾತ್ರ
   ಬಾಲಕಿಯರಿಗೆ ಒಂದರಿಂದ ಹತ್ತನೆಯ ತರಗತಿಯವರೆಗೆ.
2. ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದಲ್ಲಿ ಅಕ್ಕಮಹಾದೇವಿ ಅನಾಥಾಲಯ
   ಸಂಪರ್ಕಿಸಬೇಕಾದವರು : ಶರಣೆ. ಸುಗುಣ
   ಬಾಲಕರಿಗೆ ಒಂದರಿಂದ ಏಳು
   ಬಾಲಕಿಯರಿಗೆ ಒಂದರಿಂದ ಹತ್ತನೆ ತರಗತಿಯವರೆಗೆ.
3. ಕೂಡಲಸಂಗಮದಲ್ಲಿ ಬಸವ ಕೃಪಾ ಅನಾಥಾಲಯ.
   ಸಂಪರ್ಕಿಸಬೇಕಾದವರು : ಪೂಜ್ಯ ಶ್ರೀ ಸದ್ಗುರು ಮಾದೇಶ್ವರ ಸ್ವಾಮಿಗಳು
   9483748266

   ಬಾಲಕರಿಗೆ ಮಾತ್ರ ; ಒಂದರಿಂದ ಹತ್ತನೆ ತರಗತಿಯವರೆಗೆ.
4. ಬಸವ ಕಲ್ಯಾಣದಲ್ಲಿ ಅಕ್ಕನಾಗಲಾಂಬಿಕಾ ಅನಾಥಾಲಯ
   ಸಂಪರ್ಕಿಸಬೇಕಾದವರು : ಪೂಜ್ಯ ಶ್ರೀ ಸದ್ಗುರು ಬಸವ ಪ್ರಭು ಸ್ವಾಮಿಗಳು
   9480497346

   ಬಾಲಕ-ಬಾಲಕಿಯರಿಬ್ಬರಿಗೂ ಒಂದನೆಯ ತರಗತಿಯಿಂದ 10ನೆಯ ತಳಗತಿಯವರೆಗೆ ಪ್ರವೇಶಾವಕಾಶ.
5. ಮುಕ್ತಾಯಕ್ಕ ಮ್ಯಾಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯ, ಬಸವ ಕಲ್ಯಾಣ
   5ನೆಯ ತರಗತಿಯಿಂದ 10ನೆಯ ತರಗತಿಯವರೆಗೆ, ಬಾಲಕಿಯರಿಗೆ ಮಾತ್ರ
   ಪೂಜ್ಯ ಶ್ರೀ ಸದ್ಗುರು ಬಸವ ಪ್ರಭು ಸ್ವಾಮಿಗಳು : 9480497346
6. ಕಲ್ಯಾಣಮ್ಮ (ಅನಾಥಾಲಯ) ನಿರ್ಗತಿಕ ಮಕ್ಕಳ ಕುಟೀರ. ಬೀದರ ಬಸವ ಮಂಟಪ.
   ಕೇವಲ ಬಾಲಕಿಯರು. ಒಂದನೆಯ ತರಗತಿಯಿಂದ ಹತ್ತನೆಯ ತರಗತಿಯವರೆಗೆ,
   ಪೂಜ್ಯ ಶ್ರೀ ಮಾತೆ ಸತ್ಯಾದೇವಿ :
7. ನೀಲಾಂಬಿಕಾ ಮ್ಯಾಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯ, ಬೀದರ ಬಸವ ಮಂಟಪದಲ್ಲಿ 5ನೆಯ ತರಗತಿಯಿಂದ 10ನೆಯ ತರಗತಿಯವರೆಗೆ.
8. ಅಕ್ಕನಾಗಲಾಂಬಿಕಾ ನಿರ್ಗತಿಕ ಮಕ್ಕಳ ಕುಟೀರ
   ಬಸವ ಧರ್ಮ ಪೀಠ, ಬಸವ ಮಹಾಮನೆ, ಮುಖ್ಯರಸ್ತೆ
   ಬಸವ ಕಲ್ಯಾಣ, ಬೀದರ್ ಜಿಲ್ಲೆ
   ಪೂಜ್ಯ ಶ್ರೀ ಸದ್ಗುರು ಬಸವ ಪ್ರಭು ಸ್ವಾಮಿಗಳು : 9480497346

ಶರಣೋತ್ಸವ ಸುಮಧುರ ಕ್ಷಣಗಳು









June Sanchike Published on 08-06-2017
Name of the Printer - Sumuka Printers, Bengalure-560010
Registered with Registrar of News Papers in India, New Delhi No.19988/70
Postal Registration (SSP os BG-West Dn)No.KA/BGW-50/ 2015-17, wpp-17
Licenced to Post the Printed Magazine without Prepayment (WPP-17). Posted at Bengalure PSO Mysuru Road, (Bg-560026) on 3rd, 10th, 20th of every month, Pages 32+4